ಕೊರವಂಜಿ



Koravanji

ನವೆಂಬರ್

೧೯೬೧

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಕವಿಕುಲಲಾಮ

ಶ್ರೀಮತಿ ಟಿ. ಸುನಂದಮ್ಮ

ಶ್ರೀ|| ಶಿವರಾಮ ಕಾರಂತ

ಶ್ರೀ|| ಹಾ. ರಾ.

ಶ್ರೀ|| ಕೇಫ

ಶ್ರೀ|| ರಾಮು


ಇತ್ಯಾದಿ, ಇತ್ಯಾದಿ

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ

1960ರಲ್ಲಿ ಶ್ರೇಷ್ಠ ಕನ್ನಡ ಚಿತ್ರವೆಂದು ರಾಷ್ಟ್ರಪ್ರಶಸ್ತಿ ಪಡೆದ

“ಭಕ್ತ ಕನಕದಾಸ” ತಯಾರಕರಿಂದ ಮತ್ತೊಂದು ಕಲಾಕೃತಿ



ಮೈಸೂರು ರಾಜ್ಯಕ್ಕೆ ಹಂಚಿಕೆದಾರರು:

ಕರ್ನಾಟಕ ಫಿಲಂಸ್ ಲಿಮಿಟೆಡ್,

6ನೇ ಕ್ರಾಸ್, ಗಾಂಧಿನಗರ, ಬೆಂಗಳೂರು-9.

ಕೊರವಂಜಿ

A. ANANTHIAH.

ಸಂಪುಟ ೨೦ ನವೆಂಬರ್ ೧೯೬೧ ಸಂಚಿಕೆ ೮

★ ಕುಹಕಿಡಿಗಳು ★

ಎವರೆಸ್ಟ್ ಶಿಖರವನ್ನು ನೇಪಾಳದ ಮಹಾರಾಜರೂ, ಚೀನೀಯರೂ ಒಮ್ಮತದಿಂದ ಹಂಚಿಕೊಂಡಿದ್ದಾರಂತೆ.

—ನಿಮ್ಮ ದೇಶದಲ್ಲಿ ನಿಮ್ಮನ್ನೇ ರಾಜರನ್ನಾಗಿ ಉಳಿಸುತ್ತೇವೆ ಎಂದು ರಾಜನಿಗೆ ಚೀನೀಯರು ಭರವಸೆ ಕೊಟ್ಟಿದ್ದಾರೆಂಬ ವದಂತಿ ಖಚಿತವಲ್ಲವಂತೆ !

* * * *

ಭಾವೈಕ್ಯ ಸಾಧನೆ !! ದೀಪಾವಳಿ ಪ್ರಯುಕ್ತ ಸಾಧ್ಯವೇನೋ !!

* * * *

ಕಟಾಂಗಾವು ವಿಶ್ವಸಂಸ್ಥೆಯೊಂದಿಗೆ ಕದನವಿರಾಮಕ್ಕೆ ಒಪ್ಪಿಕೊಂಡಿದೆಯಂತೆ.

—ನಮ್ಮನ್ನು ಈಗ ವಿಶ್ವಸಂಸ್ಥೆಗೆ ಸೇರಿಸಿಕೊಳ್ಳಿ ಎಂದು ಕೇಳುವುದಕ್ಕೆ ಪೀಠಿಕೆ ಇರಬಹುದೇ ?

* * * *

ರಾವಣನು ಪೂಜೆ ಮಾಡುತ್ತಿದ್ದ ಲಿಂಗವನ್ನು ಟ್ರಿಂಕೊಮಲಿಯ ಹತ್ತಿರ ಸಮುದ್ರದ ತಳದಿಂದ ತೆಗೆದಿರುವರಂತೆ—

ಅಂದಮೇಲೆ ರಾವಣ ರಾಜ್ಯಾಡಳಿತ ಮರುಕಳಿಸಬಹುದೇ ?

ಟಿಕೆಟ್ ಟಿಕೆಟ್ ಅಂತ ರೈಲ್ವೆ ಗಾಡಿಗಳಲ್ಲಿ ಕಾಳಸೂಟಿನವ ಬಂದು ಗಲಾಟೆ ಎಬ್ಬಿಸ್ತಿದ್ದನಲ್ಲಾ—ಅದರ ತರಹಾನೇ

—ಈಗ ಬಿಳಿ ಟೋಪಿಯವರು ಕೂಡ ಟಿಕೆಟ್ ಟಿಕೆಟ್ ಅಂತ ಪರದಾಡುತ್ತಾ ಇದ್ದಾರಂತೆ—ಕುದುರೆ ಜೂಜು ಕಟ್ಟೆ ಪಕ್ಕದಲ್ಲಿ!

* * * *

ಹಿಂದೂ ಸಾಗರದ ತಳದಲ್ಲಿ ಅದ್ಭುತಾಕಾರದ ಮೃಗದ ಹೆಜ್ಜೆ ಗುರುತನ್ನು ರಷ್ಯನ್ನರು ಕಂಡರಂತೆ.

—ಆ ಮೃಗಕ್ಕೆ ಈಗಾಗಲೇ ಕಮ್ಯೂನಿಸ್ಟ್ ಪಾಠಗಳನ್ನು ಒದಗಿಸುತ್ತಿದ್ದಾರೆಂದು ಅಮೆರಿಕಾದವರು ಆಕ್ಷೇಪಣೆ ಎತ್ತಿಲ್ಲವಂತೆ!

* * * *

ಭಾರಿ ಪ್ರವಾಹಗಳು,—೫೦ ಮೆಗಟನ್ ಅಣುಬಾಂಬು—ಚುನಾವಣಾ ಪ್ರಕರಣ—ನಮ್ಮತ್ತೆ ಮನೆಗೆ ಬಂದಿರೋದು,

ಎಲ್ಲವನ್ನೂ ನೋಡಿದರೆ ಅಷ್ಟ ಗ್ರಹಗಳು ಒಂದೆಡೆ ಇಷ್ಟರಲ್ಲೇ ಸೇರುತ್ತವೆ ಎಂಬುದರ ಮುನ್ಸೂಚನೆಯೋ ಎನ್ನಿಸುತ್ತೆ.

* * * *

ದೇಶದ ಹಿರಿಯ ಹಿರಿಯ ವೈಜ್ಞಾನಿಕರೆಲ್ಲ, ಜ್ಯೋತಿಶ್ಶಾಸ್ತ್ರದಲ್ಲಿ ಅಗಾಧ ವಿಶ್ವಾಸವನ್ನು ಪ್ರದರ್ಶಿಸುತ್ತಿದ್ದಾರಂತೆ.

—ಅಂದರೆ ಅವರವರ ಕೆಲಸಕ್ಕೆ ಧಕ್ಕೆ ಬರೋ ಹಾಗಿದೆ ಅಂತಲೋ, ಅಥವಾ....

* * * *

ಕೃಪಲಾನಿ, ಕೃಷ್ಣಮೆನನ್ನರ—ಚುನಾವಣಾ ಪಂದ್ಯದಲ್ಲಿ

—ಬೊಂಬಾಯಿನ ಜಾಣ ಜೂಜುಕೋರರು ೧—೧೦ರ ಹಾಗೆ ಬಾಜಿಯನ್ನು ಕೃಪಲಾನಿಯವರ ಪರ ಏರಿಸಿದ್ದಾರಂತೆ!!

* * * *

ಭಾರಿ ಮೆಗಟನ್ನಿನ ಅಣು ಬಾಂಬೊಂದನ್ನು ರಷ್ಯ ಪ್ರಯೋಗಾರ್ಥವಾಗಿ ಆಸ್ಫೋಟ ನಡೆಸಿತು.

(ವರದಿ)

—ಸ್ಮಶಾನ ರುದ್ರನು ಢಮರುಗವನ್ನು ಬಾರಿಸಿರಲೇಬೇಕು! ಈಗ!

ಇದು ಕೇಳಿದ್ದೀರಾ ?

ದೇವೇಂದ್ರನ ಅರಮನೆಯಲ್ಲಿ ಬಾಸುಂದಿ ಮಾಡಿದಾಗ ಅಷ್ಟದಿಕ್ಪಾಲಕರೂ ಬಂದು ಹಬ್ಬ ಮಾಡುತ್ತಿದ್ದರು. ಅಷ್ಟು ರುಚಿಯಾಗಿ ಬಾಸುಂದಿಯನ್ನು ಅಡಿಗೆಯ ಮಾಣಿ ಮಾಡಿ ಬಡಿಸುತ್ತಿದ್ದ. ಯಮಧರ್ಮರಾಯ ಕೂಡ ಒಮ್ಮೆ "ದೇವೇಂದ್ರ ಪ್ರಭೋ! ಅವತ್ತು ಮೋಹಿಸಿ ನಮಗೆ ಬಡಿಸಿದ ಅಮೃತ ಕೂಡ ಈ ಬಾಸುಂದಿ ಮುಂದೆ ಹೇಳ ಹೆಸರಿಲ್ಲದೆ ಹೋಗುತ್ತೆ. ಅಮೃತ ಕುಡಿದರೆ ಸಾವಿಲ್ಲ ದಿಟ. ಆದರೆ ಬದುಕನ್ನೆ ಈ ಬಾಸುಂದಿ ರುಚಿಮಯ ಮಾಡುತ್ತೆ ಎಂದು ಉದ್ಗಾರಿಸಿದ್ದ.

ಅಂಥ ಅಡಿಗೆಯ ಮಾಣೀನ ಅರಮನೆಯಾಕೆ ಶಚಿದೇವಿಯು ಬಲು ವಿಶ್ವಾಸ ದಿಂದ ನೋಡಿಕೊಳ್ಳುತ್ತಿದ್ದಳು.

ಒಂದು ದಿನ ಏನೋ ಯೋಚನೆಯಲ್ಲಿದ್ದ ಅಡಿಗೆ ಮಾಣಿ ಬಿಸಿ ಬಾಸುಂದೀನ ಇಳಿಸೋವಾಗ ಮೈಮೇಲೆ ಬಾಂಡ್ಲೆ ಜಾರಿ ಬಿತ್ತು. ಮೈಯೆಲ್ಲಾ ಸುಟ್ಟು ಹೋಯ್ತು. ಇಂದ್ರನೇ ಅಡಿಗೆಯ ಮಾಣಿಯನ್ನು ಉಚ್ಚೈಶ್ರವಸ್ಸು ಕಟ್ಟಿದ್ದ ಗಾಡೀಲಿ ಕೂರಿಸಿಕೊಂಡು ಅಶ್ವಿನಿಕುಮಾರರ ದವಾಖಾನೆಯಲ್ಲಿ ದಾಖಲ್ ಮಾಡಿ ಬಂದ. ಏನು ಖರ್ಚಾದರೂ ಪರವಾಗಿಲ್ಲ. ಪಿಂಪ್ರಿ ಇಂದಾನೆ ಬೇಕಾದರೂ ತರಿಸಿ ಔಷಧಿಗಳನ್ನ ಎಂದ, ದೇವೇಂದ್ರ ಮನೆಗೆ ಬರುತ್ತಿದ್ದಹಾಗೆ " ಹೇಗಿದಾನೆ ಅಂದ್ರೆ ಬಲು ಸಂಕಟ ಪಡ್ತಾ ಇದ್ದನೇ" ಎಂದು ಶಚಿದೇವಿ ಕೈಕಾಲಿಗೆ ನೀರು ಕೊಡುತ್ತಾ ಗಂಡನನ್ನು ಕೇಳಿದಳು.

"ಪರವಾಗಿಲ್ಲ ಕಣೆ! ಸೋಮರಸ ಕುಡಿಸಿದರು, ಅರೆನಿದ್ರೇಲಿ ಯಾವುದೋ ಹಾಡುಪಲುಕ್ತಾ ಇದ್ದ" ಎಂದು ದೇವೇಂದ್ರ ಹೇಳಿದ.

ಮಾರನೆಯ ಸಾಯಂಕಾಲ ಅಶ್ವನಿಕುಮಾರರ ದವಾಖಾನೆಗೆ ಶಚೀದೇವಿ ರೋಗಿಯನ್ನು ನೋಡಿಕೊಂಡು ಬರಲು ಹೋದಳು. ಬೇಗ ಬಂದುಬಿಡೋಣ ಅಂತ ಒಬ್ಬಳೇ ಹೋದಳು.

ಅಶ್ವಿನಿ ಕುಮಾರರ ದವಾಖಾನೆಯಲ್ಲಿ ದಾದಿಯೊಬ್ಬಳು ರೋಗಿಯ ಬಳಿ ಕಾವಲಿದ್ದಳು. ಶಚೀದೇವಿಯ ಪರಿಚಯ ಬಡ ದಾದಿಗೆ ಹೇಗೆ ತಾನೆ ಆಗಬೇಕು? "ಯಾರಮ್ಮಾ ನೀವು? ಏನು ಬೇಕಾಗಿತ್ತು" ಎಂದು ಕೇಳಿದಳು.

"ಮೈ ಸುಟ್ಟ ಮಾಣೀನ ನೋಡಿಕೊಂಡು ಹೋಗೋಣ ಅಂತ ಬಂದೆ" ಎಂದಳು ಶಚೀ "ಅಯ್ಯೋ! ಪಾಪ! ಉರಿ ಉರಿ ಅಂತ ಅಳ್ತಾ ಇದಾನೆ" ಅವನ ಹೆಂಡ್ತಿನೇನಮ್ಮಾ ನೀವು ದೇವೇಂದ್ರರಸರ ಮನೇಲಿ ನೀವೂ ಕೆಲಸಕ್ಕಿದ್ದೀರಾ ಎಂದು ಕೇಳಿದಳು ದಾದಿ. ಶಚೀದೇವಿಗೆ ಕೋಪ ಉಕ್ಕಿಬಂತು. ಕಾರಣ ಮೊದಲಾಗಿ ಸ್ವರ್ಗದ ರಾಣಿಯನ್ನು ಪ್ರಜೆಯೊಬ್ಬಳು ಗುರ್ತಿಸದೆ ಇದ್ದಿದ್ದು, ಎರಡನೆಯದಾಗಿ ಮಾಣಿಯ ಹೆಂಡ್ತೀನೆ ಎಂದು ಅರಸರ ಹೆಂಡತಿಯಾದ ತನ್ನನ್ನೇ ಕೇಳಿದ್ದು. ಯಾರೇ ಇಂದ್ರನಾಗಲೀ, ತಾನು ಮಾತ್ರ ಖಾಯಂ ರಾಣಿಯಾದ ಧೀರಣಿ. ನನ್ನ ಹೀಗೆ ಕೇಳ್ತಾಳಲ್ಲ ಎಂದು ಕೋಪ ಕೋಡ್ಡಿ ಹರಿಯಿತು.

"ಅವನ ಹೆಂಡ್ತಿ ಅಲ್ಲ. ನಾನು ಸುಮ್ಮನೆ ಇಟ್ಕೊಂಡಿಧೀನಿ" ಎಂದಳು ಶಚಿ. ದಾದಿ ನಕ್ಕಿದ್ದು ಶಚಿಗೆ ಕಾಣಿಸಲೇ ಇಲ್ಲ.

*   *   *   *

ಚಿಕ್ಕದೇವರಾಯರ ಕಾಲದಲ್ಲಿ ಅರಮನೆ ಪಂಡಿತರು ಮಾಡಿದ್ದನ್ನೆಲ್ಲಾ ಕೇಳಿದ್ದೀರಿ. ಆದರೆ ಆ ಪಂಡಿತರು ಗಿಡಮೂಲಿಕೆಗಳನ್ನು ದ್ರವ ಔಷಧಿಗಳನ್ನೂ ತರಿಸಿಕೊಳ್ಳುತ್ತಿದ್ದ ಗ್ರಂಧಿಗೆ ಅಂಗಡಿ ಪಾಪಯ್ಯನ ವಿಚಾರ ಕೇಳಿದ್ದೀರಾ? ಪಾಷಾಣದ ಅಂಗಡಿ ಪಾಪಯ್ಯ ಎಂದೇ ಅವನ ಹೆಸರು. ಪಂಡಿತರು ಹಕೀಮರು, ಹೆರಿಗೆಗೆ ನೆರವಾಗುವ ಅಡುಗೂಲಜ್ಜಿಗಳೂ ಎಲ್ಲರೂ ಪಾಷಾಣದ ಅಂಗಡಿ ಪಾಪಯ್ಯನ ಬಳಿಗೆ ಬೇಕಾದ ರಸಪಾಷಾಣಗಳಿಗೆ ಹೋಗುತ್ತಿದ್ದರು.

ಪಾಪಯ್ಯ ಜಾಣ ವ್ಯಾಪಾರಿ. ರಸಪಾಷಾಣ ಮಾಡಬೇಕಾದರೆ ತುಂಬಾ ಕಷ್ಟಪಡಬೇಕು. ಹತ್ತಾರು ಬಾರಿ ಕಲ್ಪತ್ತಿನಲ್ಲಿ ಮಡಿಯಾಗಿ ಅರೆಯಬೇಕು. ಮಡಿ ಹೆಂಗಸರು ಈ ಕೆಲಸಕ್ಕೆ ಸುಲಭವಾಗಿ ಸಿಕ್ಕುತ್ತಿರಲಿಲ್ಲ. ಹಾಗಾಗಿ, ಹೆಸರು ಬಂದಿತ್ತಾದ್ದರಿಂದ, ನಕಲು ವಸ್ತುಗಳನ್ನೇ ಮಾರಲು ಶುರು ಮಾಡಿಕೊಂಡಿದ್ದ.

ಒಂದು ಸಾರಿ ಅರಮನೆ ಪಂಡಿತರು, ಹಿರಿಯ ಅವ್ವೆಯ ತಾಪತ್ರಯ ನೀಗಿಸಲು ಸೆರಗು ಪಾಷಾಣ ತರಿಸಿ ಉಪಯೋಗಿಸಿದರು. ಎಣಿಸಿದ ಫಲ ದೊರೆಯಲಿಲ್ಲ. ಪಂಡಿತರು ಪಾಪಯ್ಯನನ್ನು ಬರಮಾಡಿಕೊಂಡು, ನೀ ಕೊಟ್ಟ ಔಷಧಿ ಶುದ್ಧ ಮೋಸ, ಈ ಪಾತಕ ಮಾಡಿದಕ್ಕೆ ನಿನ್ನನ್ನು ಕಲ್ಲುಗಾಣಕ್ಕೆ ಹಾಕಿ ಅರೆಸ್ತೀನಿ, ದೊರೆಗಳಿಗೆ ಹೇಳಿ ಎಂದು ಹೆದರಿಸಿದರು.

ಪಂಡಿತರ ಪ್ರಭಾವ ಎಷ್ಟೆಂಬುದು ಪಾಪಯ್ಯನಿಗೆ ಗೊತ್ತು. ಮನೆಗೆ ಬಂದ. ಕಲ್ಲುಗಾಣಕ್ಕಿಂತ ವಿಷತೊಗೊಂಡು, ಸಾಯೋದು ಸುಖ ಎಂದಂದುಕೊಂಡು, ಸೇವಕನನ್ನು ಕರೆದು ಗ್ರಂಧಿಗೆ ಅಂಗಡಿಗೆ ಹೋಗಿ, ಕಾಳಪಾಷಾಣ ಒಂದು ತೊಲ

ತೊಗೊಂಡು ಬಾ, ಎಂದು ಎರಡಡ್ಡ ಹಣ ಅವನ ಕೈಲಿ ಇಟ್ಟರು. ಸೇವಕ ಹೋಗಿ ಕಾಳಪಾಷಾಣ ತಂದ. ದೇವರಿಗೆ ನಮಸ್ಕಾರ ಮಾಡಿ ಪಾಪಯ್ಯ ಕಾಳಪಾಷಾಣವನ್ನು ನುಂಗಿದ ಮಲಗಿದ-ಸುಖವಾಗಿ ಸಾಯ್ತೀನಿ ಅನ್ನೋ ಧೈರ್ಯ!

ಬೆಳಗಾಯ್ತು. ಎಚ್ಚರವಾಯ್ತು ಪಾಪಯ್ಯನಿಗೆ. ನೋಡ್ತಾನೆ ತನ್ನ ಕೊಠಡಿ ತನ್ನ ಹಾಸಿಗೆಯಲ್ಲೇ ಇದ್ದಾನೆ. ಸೇವಕನನ್ನು ಕರೆದ. ಕಾಳಪಾಷಾಣ ಯಾರ ಅಂಗಡೀದೋ ಎಂದು ಕೇಳಿದ.

ನಮ್ಮಂಗಡಿಯಿಂದಾನೆ ತಂದೆ ಎಂದು ಸೇವಕ ಒಪ್ಪಿಕೊಂಡ. ಆ ಹೊತ್ತಿಗೆ ಪಂಡಿತರು ಕಾಗದ ಕಳಿಸಿದ್ದರು. "ಹಿರಿಯ ಅವ್ವೆ ಈಗ ಹಗೂರಾಗಿದ್ದಾಳೆ. ನೀನು ಕಳಿಸಿದ ಔಷಧಿ ಕೆಲಸ ಮಾಡಿತು. ನಿನ್ನ ಬೈದಿದಕ್ಕೆ ವಿಷಾದ" ಎಂದು ಬರೆದಿದ್ದರು.



"ನೀವು 50 ರೂಪಾಯಿ ಕೊಟ್ರಿ, ನಾನು ಅಷ್ಟೆ 25 ಕೇಳಿದ್ರು 50 ರೂ. ಕೊಟ್ಟೆ,
ಯಾಕೆ ಸ್ವಾಮಿ ಅವರು ಈಸ್ಕೊಂಡಿದ್ದು"

ಶೀನಣ್ಣನ ಪ್ರಾಣಾಯಾಮ

ಶೀನಣ್ಣ ಲೋಕ ಕಾನನ ಕಾಗೆ ಶೀನಣ್ಣ
ಸಂಸಾರ ಸಿಂಬಳದಿ ಸಿಕ್ಕನೊಣ ಸೀನಣ್ಣ
ಡ್ಯಾಕನಳ್ಳಿಯ ಕಕವ, ಎಮ್ಮೆಹಟ್ಟಿಯ ಬಕರ
ಶೀನಣ್ಣ ಯೋಜನೆಗೆ ಸಿಕ್ಕ ಪಟ್ಟೇದಾರ

ಶೀನಣ್ಣನೊಂದು ದಿನ ಪ್ರಾತರಾಹ್ನಿಕ ಮಾಡುತ್ತಿರುವಾಗ ಮಗ ಬಂದ

"ಪ್ರಾಣಾಯಾಮೇ ವಿನಿಯೋಗಃ
ಓಂ ಭುವಃ, ಲೀ ಗಣಿಯ
ಓಂ ಸುವಃ, ಬಿತ್ತಿದ್ದು
ಓಂ ಮಹಃ, ಆಯಿತೇನೋ"
"ಓಂ ತಪಃ" "ಆಯಿತಪ್ಪಾ"
"ತತ್‌ಸವಿತರ್........ಬೀಜದ ಚೀಲ ತಂದೆಯೇನೊ"
"ವರೇಣಿಯಂ" "ಗಾಡಿಯಲಿ ಜಾಗವಿರಲಿಲ್ಲ"

ರೇಗಿದನು ಶೀನಣ್ಣ 'ಎಲೆಲೇ ದರಿದ್ರನನಮಗನೆ ಕರಡಿಗೆ ಮೀಶೆ ಭಾರವೇ, ನಿನ್ನನೇ ಯಾತರಿಂದಲಿ ಒದ್ದು

(ಭರ್ಗೋ ದೇವಸ್ಯ ಧೀಮಹಿ) .... –

* * * *

ಬಳಿಕೆದ್ದು ಬಂದು ರಾಮಣ್ಣನನು ಕೇಳಿದನು ಶೀನಣ್ಣ.
"ರಾಮಣ್ಣ ಏನು ಪ್ರಾಣಾಯಾಮ ? ಅದರರ್ಥವೇನು ?
ಈ ಯೋಗ ಸಾಧನೆಯ ಮಾಡುವುದದೆಂತು ?"
ಹೇಳಿದನು ರಾಮಣ್ಣ ಕೇಳಿದನು ಶೀನಣ್ಣ, ಆ ದಿವಸ ಸಂಜೆಯೇ.

ಕೃಷ್ಣಾಜಿನವ ಹಾಸಿ ಪದ್ಮಾಸನವ ಒಲಿದು
ದೇಹವನು ನೇರವಾಗಿಸಿ ತನ್ನ ದೃಷ್ಟಿಯನು
ಭ್ರೂಮಧ್ಯದಲ್ಲಿ ನಿಲಿಸಿ ವಾಯುವನು ಬಂಧಿಸಿದ.

ಹದಿನೈದು ನಿಮಿಷವೂ ಕಳೆದಿಲ್ಲ, ಅಷ್ಟರಲಿ ಶೀನಯೋಗಿಗೆ
ದಿವ್ಯಜ್ಯೋತಿ ಕಾಣಿಸಿಕೊಂಡು ಚಂದ್ರ ಬಿಂಬವ ಹಳಿವ
ಕಾಂತಿಯಲಿ ಹೊಳೆದಿತ್ತು, ಸಂತಸವೊ ಬೆಳೆದಿತ್ತು
ಲೋಕವಾಸನೆಯಳಿದು ಜ್ಞಾನ ತೊಳತೊಳಗಿತ್ತು.

ಶೀನಣ್ಣ ಹರುಷದಲ್ಲಿ ಮುಳುಗಿ ತೇಲಾಡುತ್ತ ರಾಮಣ್ಣನಿಗೆ ಬಂದು ಹೇಳಿದನು ವಾರ್ತೆಯನು ಕೇಳಿದನು ರಾಮಣ್ಣ.

ವಿಸ್ಮಯದಿ ಮುಳುಗಿದನು 'ಅಹಹ ಏನಿದು ಚೋದ್ಯ
ಶೀನಣ್ಣ ನಿತ್ಯಸಿದ್ಧರ ಮಾಲೆಯೊಳಗಿಹನೇ
ಅದೆ ಆಳು ಅದೆ ಬಾಳು ಅದೆ ಸುಳ್ಳ ಅದೆ ಠಕ್ಕು
ಕರ್ಮಯೋಗವು ಇಲ್ಲ ಜ್ಞಾನ ಮೊದಲೇ ಇಲ್ಲ
ಬಾಯಿಯೋ ಬೊಂಬಾಯಿ ವಿದ್ಯೆ ಸೆಜ್ಜೆಯ ಮುದ್ದೆ
ಇವನಿಗಾ ಜ್ಯೋತಿ ಕಾಣಿಸಿತೆಂತೋ ಶಿವ ಶಿವಾ"
ಎಂದು ಚಿಂತಿಸಿ ನೋಡಿ " ಒಳ್ಳೆಯದು ಶೀನಣ್ಣ
ಈಗಲೂ ಜ್ಯೋತಿ ಕಾಣುತಲಿಹುದೆ ?" ಎಂದ.
" ಕಾಣಿಸುತಲೇ ಇಹುದು " ಎಂದೆ ಶೀನಣ್ಣ
ಅಂತಾದೊಡಾ ಮೂಗ ಮೇಲಿರುವ ವೀಭೂತಿಯನು ಅಳಿಸು
ಇನ್ನೊಮ್ಮೆ ನೋಡು ಎನೆ ರಾಮಣ್ಣ
ಶೀನಣ್ಣನಂತೆಯೇ ಮಾಡಿದನು ನೋಡಿದನು
ಏನಿಲ್ಲ ಬರಿಬಯಲು ಎಂದೆ ಶೀನಣ್ಣ
ಜ್ಯೋತಿಯೋ ವಿಭೂತಿಯೋ ಕಂಡುದೇನನು ನೀನು
ಹೇಳಯ್ಯ ಶೀನಯ್ಯ ಎಂದ ರಾಮಣ್ಣ.

* * *

ಬಾನ್ ಬಯಲು ಹುಚ್ಚಾಯ್ತು ಬರಿ ಶರನ್ನವರಾತ್ರಿ
ತೊಳೆದ ಬೆಳದಿಂಗಳಲಿ ರಾತ್ರಿ ಹುಚ್ಚು
ಬಿಳಿ ಬಿಳೀ ಮೋಡದಲ್ಲಿ ಹಗಲು ಹುಚ್ಚು
ಕವಿಯ ಮನಸಿಗು ಹುಚ್ಚು, ಮಾಡಿಯಂ ವೇವಿನಲಿ
ಕಾವ್ಯಧಾರೆಯು ವಿಶ್ವವಿಸರಣದ ಯಾತನೆ
ಕವಿಖೂಳನಿಗೆ ಸ್ವರ್ಣಯುಗದ ಹುಚ್ಚು
ಕಂಡದ್ದು ನೋಡನವ ಹೇಳಿದುದ ಕೇಳನವ
ಮುಸುಕಿಲದ ಕಾಳರಾತ್ರಿಯ ನೋವನೀ ಮನುಜ

ಪ್ರಗತಿಯೆನ್ನುವ ಕೇಳಿ ನಾನಾದೆ ಪೆಚ್ಚು
ಏನೇನನೆಂದನೋ ನೆನಪಿಲ್ಲ ನೆನೆವಂಥ ದೇನನೂ
ಅವ ಹೇಳಲಿಲ್ಲ ಹೇಳಿದುದೆಲ್ಲ ಮೋಸಗಾರಿಕೆ ಮಾತು.

" ಕಾಳ ರಾತ್ರಿಯು ಕಳೆದು ಮುಂದೆ ನಡೆದಿದ್ದೇವೆ "

[ಅಣುಶಸ್ತ್ರ ರೇಸನಿವ ಮರೆತನೇ ಲೋಕದಲ್ಲಿ ಎರಡು ಬಣಗಳ
ದ್ವೇಷವರಿಯನೇ ಕವಿಮೂಢ, ಜೀವನವು ದುಃಖಮಯ
ವೆಂದೆನುವ ಬುದ್ಧವಾಕ್ಯವ ಮರೆತನೇ ಬುದ್ದು]
ಏಕೆಂದ ನಿವ ಹೀಗೆ? ನೀವರಿಯದಿದ್ದರೂ ನಾಬಲ್ಲೆ ಅದನ್ನೆಲ್ಲ
ಕಳೆದ ಹಳೆವರುಷದಲಿ ಕಾಲೇಜು ದಾರಿಯಲಿ
ನಡೆದ ಹೆಣ್ಗಳ ಹಿಂದೆ ನಾಯಿಯಂತಲೆದನಿವ
ಮುನ್ನೂರು ದಿವಸವೂ ಅಗ್ಗ ಲಘುಗೀತೆಗಳ ಹೊಲಸು
ಸಿನಿಗೀತೆಗಳ ಹಳಸು ಶನಿಗೀತೆಗಳ ಕುರುಕಿ ಕುಣಿದಿದ್ದನಿವ
ವರ್ಷಾಂತ ದೊಳಗೆಯೇ ಮೂರಲ್ಲದಿದ್ದರೂ
ಒಂದು ಜೀವದಮೇಲೆ ದುರ್ವಾರ್ತೆ ಹೊರೆಯನಿವ ಹೇರಿ ಸಾರಾದ
ಮುಗಿಯಿತಾ ಹಳೆಕೊಳೆಯ ವರ್ಷ ಅರವತ್ತೊಂದು-ಎರಡು
ಸಾಲಿನ ಲಿವಗೆ ಕಾಣಲಿಲ್ಲಾ ಜೀವ, ದುರುಪವಾದದ ಹೊರಗೆ
ತುತ್ತಾಗಿ ತಾಹೊತ್ತ ನೋವನಿವನಿಗು ಕೊಂಚ ಕಸಪೊರಕೆ ತುದಿಯಲ್ಲಿ
ನೀಡಲೆಳಸಿದ ಜೀವ, ಅಂತೆ ಭಂಡರ ಭಾವ ನೀ ಕನ್ನಡವಕಾವ
ಉಳಿದು, ಕಳೆದಾ ಕಥೆಯ ನಿಂತುಸಿರ್ದ

" ಹೊಸ ದಿಗಂತಗಳಲ್ಲಿ ಹೆಜ್ಜೆ ಹಾಕಿದ್ದೇವೆ "

ತಾನೊಬ್ಬನಲ್ಲದೆಯೇ ನಮ್ಮನೂ ತನ್ನೊಡನೆ ಬೆರಸಿ
ಬೊಗಳುವ ಇವನ ತಂತ್ರ ನೀವರಿದಿರಾ
[ಎಲೆ ಕಾವ್ಯ ಜಿಂದಗಿಯ ಜಿಂಬೊ 'ಹಾಕಿದ್ದೇನೆ' ಎಂದೆನ್ನು]
ಅವನೇನು ಕೆನ್ನೆಡಿಯೇ? ಹೊಸ ದಿಗಂತಗಳಾವು ಕ್ಯೂಬವೇ
ಬರ್ಲಿನ್ನೆ ಲಾವೋಸೆ ಆಫ್ರಿಕವೇ?
ಅವನಿರುವುದಲ್ಲಿಯೆ, ಅದೆ ಹಳೆಯ ದಾರಿಯಲಿ
ಹೊಸ ಹೊಸಾ ಕಣ್ಣುಗಳು; ಅದೇ ತೆರೆದ ಬಾಯಿಂದ
ಅವೆ ಹಳೆಯ ಹಾಡುಗಳು, ಹೊಸ ಚಿಂತನೆಯು ಇಲ್ಲ
ಹೊಸ ಹಾಡುಗಳು ಇಲ್ಲ, ಹೊಸ ಭಾವ ಬರಲಿಲ್ಲ
ನಿಸ್ಸಾರ ಗೀತೆಗಳು, ನಿಸ್ಸಾರ ಹೃದಯ!
ದಿವ್ಯಾನು ಭವವೆಲ್ಲ ಕಂಡುದನೆ ಅರಿಯದಿರಿ?
ಅಲ್ಲಿ ಸಲ್ಲಲು ಬಹುದೆ ಇಲ್ಲಿಯೇ ಸಲ್ಲದಿರೆ?

—ಕವಿಕುಲಲಾವ

ಪುಸ್ತಕ ಓದುತ್ತಾ ಇದ್ದೆ-ಕಣ್ಣುಬಿಟ್ಟೆ !

ಒಂಟಿ ಸಲಗ

ಬಿಳಿಗಿರಿರಂಗನ ಬೆಟ್ಟ. ದಟ್ಟವಾದ ಕಾಡು. ಬೊಂಬಿನ ಮೆಳೆ ಹತ್ತಿರದಲ್ಲಿ ಆನೆಗಳ ಹಿಂಡೊಂದು ಮೇಯುತ್ತಾ ಇತ್ತು. ಬೊಂಬಿನ ಎಸಳನ್ನು ಹಗೂರಾಗಿ ಕಿತ್ತು ಸಲಗನು ಹೆಣ್ಣಾನೆಗಳ ಬಾಯಿಗೆ ಸೊಂಡಿಲಿನಿಂದಲೇ ಕಾಣಿಕೆ ಕೊಡುತ್ತಿದ್ದ ಅವನ ಹೊಟ್ಟೆ ತುಂಬಿದ್ದ ಕಾರಣ ಸರಸವಾಡಲು ಶುರು ಮಾಡಿದ್ದ. ಮೂರಡಿ ಉದ್ದದ ಕೊಂಬಿನಿಂದ ಅವಳಿವಳನ್ನು ಕುಚಗುಳಿ ಇಡುತ್ತಾ ನಲಿಯುತ್ತಿದ್ದ-ನಲಿಸುತ್ತಿದ್ದ.

ಹಿಂಡಿನ ಹಿಂದೆ ಹಿಂದೆ ಇದ್ದ ಕಾವೇರಿ ಕಾಡಿನೊಳಕ್ಕೆ ಸಪ್ಪಳ ಮಾಡದೆ ಜಾರಿಕೊಂಡಳು. ಅವಳ ಹಿಂದೆಯೇ ಗಿರಿಯನೂ ಮೆಲ್ಲಗೆ ನಡೆದ. ಹತ್ತಾರು ಹೆಜ್ಜೆ ಹಾಕೋದರಲ್ಲಿ ಅವಳ ಪಕ್ಕಕ್ಕೆ ಬಿದ್ದ "ಬಾರೇ! ಕಾವೇರಿ, ನದೀಗೆ ಹೋಗಿ ಈಜಿಕೊಂಡು ಬರೋಣ" ಎಂದ. ಕಾವೇರಿ ಹೇಳಿದಳು "ನದಿ ತುಂಬಾ ದೂರ ಇದೆ. ಹೋಗಿ ಬರೋ ಹೊತ್ತಿಗೆ ಹಿಂಡಿನಲ್ಲಿ ಇಲ್ಲದೆ ಇರೋದು ಗೊತ್ತಾಗಿಬಿಡುತ್ತೆ. ಆಮೇಲೆ ಸಲಗಯ್ಯ ಏನು ಮಾಡಿದರೂ ಮಾಡಿಬಿಡೋನೆ, ಅವನಿಗೆ ಮೂಗಿನ ತುದೀಲೆ ಬಲು ಕೋಪ" ಎಂದು. ಗಿರಿಯನಿಗೆ ಕೋಪ ಬಂತು. "ಯಾವಾಗಲೂ ಹೀಗೆ ಹೆದರಿಕೋತಿ ಕಣೆ ನೀನು, ನಾವೇನು ಎಳೆಮಕ್ಕಳೇನೆ ಈಗ, ಸಂಜೆ ಮುಂದೆ ವಾಕಿಂಗ್‌ಗೆ ಹೋಗಿದ್ದೆವು. ಅಂದರಾಯಿತು. ಬಾರೇ ಹೋಗೋಣ ಮೈಯೆಲ್ಲಾ ಬಿಸಿಯಾಗಿದೆ ನೀರಿನಲ್ಲಿ ಬಿದ್ದು ಬಂದರೆ ಹಿತವಾಗಿರುತ್ತೆ ಕಣೆ" ಎಂದು ಹೇಳಿದ. ಸೊಂಡಿಲ ತುದಿಯಿಂದ ಕಾವೇರಿ ಗಲ್ಲವನ್ನು ಮೆಲ್ಲಗೆ ನೇವರಿಸಿದ. ಕಾವೇರಿ ತನ್ನ ಸೊಂಡಿಲನ್ನು ಗಿರಿಯನ ಕಪೋಲದ ಮೇಲೆಲ್ಲಾ ಆಡಿಸಿದಳು. "ಇದೇನೋ ಗಿರಿಯ! ಹಣೆ ಪಕ್ಕಗಳಲ್ಲಿ ಎಲ್ಲಾ ಒದ್ದೆಯಾಗಿದೆ. ಅಳ್ತಾ ಇದ್ದ್ಯಾ! ಇದಕ್ಕೆಲ್ಲಾ ಅಳಬಾರದಪ್ಪ ತ್ಸು, ತ್ಸು. ಆವತ್ತು ಹುಲಿಯೊಂದು ಬಸರಿ ಚಂಪಿಮೇಲೆ ಬಿದ್ದಾಗ, ಸಲಗಯ್ಯ ಮಾಡಿದ್ದು ನೋಡಿದೆಯಲ್ಲಾ! ಎಲ್ಲೋ ಇದ್ದೋನು ಧಡಬಡ ಓಡಿ ಬಂದು, ಕೊಂಬಿನಿಂದ ಹುಲಿಯನ್ನು ತಿವಿದ ಜೋರಿಗೆ ಹೊಟ್ಟೆಯಿಂದ ಬೆನ್ನಿನ ತನಕ ಕೊಂಬು ಇರಿಯಲಿಲ್ಲೇ! ಹಾಗೇ ಹುಲೀನ ಮರಕ್ಕೆ ಉಜ್ಜಿ ನುಜ್ಜುಗುಜ್ಜ ಮಾಡಲಿಲ್ಲೇ! ಕಡೇಗೆ ಜ್ಞಾಪಕ ಇದೆಯೇ! ಆ ಹುಣಿಸೇ ಮರಾ ಕೂಡ ಬಿದ್ದು ಹೋಯ್ತಲ್ಲ?

"ಸಲಗಯ್ಯನಿಗೆ ಕೋಪ ಬಂದರೆ ಯಾರಿಗೂ ಒಳ್ಳೇದಲ್ಲಪ್ಪ!" ಎಂದಳು ಕಾವೇರಿ. "ಬಿಡೇ! ಹಾಗೇನಾದರೂ ಕೋಪಬಂದರೆ ನನ್ನ ಏನು ಮಾಡ್ತಾನೆ ನೋಡೇಬಿಡ್ತೀನಿ. ಒಂದು ಪಟ್ಟು ಕುಸ್ತಿ ಆದರೆ ನಾನು ಸಿದ್ಧನಾಗಿರ್ತೀನಿ. ಇನ್ಯಾಕೆ ಹೆದರಿಕೆ?" ಎಂದು ಗಿರಿಯು ಪುಸಲಾಯಿಸಿದ. ಇಬ್ಬರೂ ನದಿ ಕಡೆಗೆ ಹೋದರು.

ಹಿಂತಿರುಗಿ ಬಂದಾಗ ಹಿಂಡಿನ ಮುಂದೇನೆ ಸಲಗಯ್ಯ ಸೊಂಡಿಲನ್ನು ಮುಸೀತಾ ನಿಂತಿದ್ದ. ಗಿರಿಯನ್ನ ಕಂಡ ಕೂಡಲೇ ಅವನ ಮೇಲೆ ನುಗ್ಗಿ ಒಂದು ಬಾರಿ ಗುಮ್ಮಿದ. ಗಿರಿಯನ ಕಾಲು ಮಗಚಿಕೊಂಡಿತು. ಆದರೆ ಗಿರಿಯು ತಿರುಗಿ ಎದ್ದ. ಪಕ್ಕಕ್ಕೆ ಸರಿದು ಸಲಗಯ್ಯನನ್ನು ಝೋಕು ಕೊಟ್ಟು ಡುಮ್ಮಿದ ಗಜಕಾಳಗ ಅರ್ಧ ದಿನ ನಡೆಯಿತು. ಸಲಗಯ್ಯನ ಒಂದು ಕೊಂಬು ಮುರಿಯಿತು. ಹಣೆಯೆಲ್ಲಾ ಗಾಯ. ಗಿರಿಯನ ಯೌವನದ ಮುಂದೆ ಸಲಗಯನ ಕೌಶಲ ನಡೀಲಿಲ್ಲ. ಇನ್ನಿಲ್ಲಿದ್ದರೆ ಪ್ರಾಣಕ್ಕೆ ಅಪಾಯ, ನನ್ನವರೆದುರಿಗೆ ಅವಮಾನ ಎಂದು ಅರಿತ ಸಲಗಯ್ಯ "ಘೊಯ್ಯೋ" ಎಂದು ಘೀಳು ಹಾಕುತ್ತಾ ಒಂಟಿಯಾಗಿ ಕಾಡಿನೊಳಕ್ಕೆ ಓಡಿಹೋದ.

ಗಿರಿಯು ಹಿಂಡಿನ ನಾಯಕನಾದ. ಅವನ ಮೈಮೇಲಿನ ಗಾಯಗಳನ್ನೆಲ್ಲ ಹಿಂಡಿನ ಆನೆಗಳು ನರ್ಸುಗಳಂತೆ ಆದರದಿಂದ ಚಿಕಿತ್ಸೆ ಮಾಡಿದರು. ಹಣೆಮೇಲಿನ ಗಾಯಕ್ಕೆಲ್ಲಾ ಕಾವೇರಿಯೇ ಎಂಜಲು ಹಚ್ಚಿ ವಾಸಿಮಾಡಿದಳು.

—ಅಯ್ಯೋ! ದೇವರೆ! ಯಾವುದೋ ಕತೆ ಇದೆ ಪುಸ್ತಕದಲ್ಲಿ, ಗೂಡಾರ್ಥ ಏನಾದರೂ ಇರಬಹುದು ಅಂತ ಓದಿದರೆ. ಇಷ್ಟೇನೇ ಅನ್ನಿಸಿತು.

ಅಷ್ಟರಲ್ಲಿ ರಸ್ತೇಲಿ ಮೆರವಣಿಗೆ ಹೋಗುತ್ತಿದ್ದವರ "ಏನೇ ಬರಲಿ ಒಗ್ಗಟ್ಟಿರಲಿ" ಎಂದು ಕೂಗುವ ರಣಕಹಳೆ ಕೇಳಿಸಿತು. ಎದ್ದು ಹೋಗಿ ನೋಡಿದೆ. ಮೈಲಿ ದೂರ ಇತ್ತು ಪ್ರದರ್ಶನಕಾರರ ಮೆರವಣಿಗೆ. ಹೆಣ್ಣು ಗಂಡು ಮಗು ಮರಿ ಎಲ್ಲವೂ ಇದ್ದವು. ಇದು ಯಾರ ಪ್ರದರ್ಶನ ಯಾತಕ್ಕೋಸ್ಕರ ಅಂತ ತಿಳಿದುಕೊಳ್ಳಲು ಹೊರಕ್ಕೆ ಹೋಗಿ ವಿಚಾರಿಸಿದೆ.

ದೊಡ್ಡ ಗಿರಣಿಯೋರೆಲ್ಲ ಹರತಾಳ ಆಚರಿಸಿದ್ದಾರೆಂದೂ, ಅವರು ಕೇಳಿದ ಸೌಲಭ್ಯಗಳನ್ನು ಕೊಡೋತನಕ ಸಂಪನ್ನು ಮುಂದುವರೆಸುತ್ತಾರೆಂದೂ ತಿಳಿದು ಬಂತು. ಗಿರಣಿಗೆ ಆ ತಿಂಗಳು ಹೆಚ್ಚು ಕೆಲಸದ ಅವಶ್ಯಕತೆ ಇರೋದು ಗೊತ್ತಾಗಿ, ಈ ಸಮಯದಲ್ಲೇ ಬಿಸಿ ಹುಟ್ಟಿಸಬೇಕು ಎಂದು ಮುಷ್ಕರ ಹೂಡಿದರೆಂದೂ ತಿಳಿಯಿತು.

ಸರಿ! ಇಂಥ ಸಂದರ್ಭಗಳಲ್ಲಿ ಗಿರಣಿಯೋರು ತಲೆ ತಗ್ಗಿಸಬೇಕಾಗೋದು ಅನಿವಾರ್ಯ ಎಂದುಕೊಂಡೆ. ಮನೆಗೆ ಹಿಂತಿರುಗಿದೆ.

ಮನೆಯೋರಿಗೆಲ್ಲ ಹೇಳಿದೆ. ಹೀಗೆ ದೊಡ್ಡ ಗಿರಣಿಯೋರು ಮುಷ್ಕರ ಹೂಡಿದ್ದಾರೆ. ತಿಂಗಳಾನುಗಟ್ಟಲೆ ನಡೆಯಬಹುದು ಎಂದು ಜನ ಅನ್ನುತ್ತಿದ್ದಾರೆ. ಅಂದಮೇಲೆ ಕೆಲಸವಿಲ್ಲದ ಕೂಲಿ ಕತ್ತಲಲ್ಲಿ ಮನೇಗೆ ಇಳೀಬಹುದು. ಹುಷಾರಾಗಿರಿ ಕಳ್ಳತನದ ಸಂಭವ ಹೆಚ್ಚು. ಎಂದು ಮುಂಜಾಗ್ರತಾ ಕ್ರಮವನ್ನು ಕೈಕೊಂಡೆ.

ಆದರೇನಾಯ್ತು ಗೊತ್ತೆ? ಆರೇ ದಿನದಲ್ಲಿ ಮುಷ್ಕರ ಮುಕ್ತಾಯವಾಯ್ತು. ಅರ್ಧ ಜನ ಕೆಲಸಕ್ಕೆ ಹೋದರಂತೆ. ಮೂರು ದಿನ ಉಳಿದೋರು ಹೊಡೆದಾಡಿದ ರಂತೆ ಆಮೇಲೆ ಅವರೂ ಬೇಶರತ್ತಾಗಿ ಹಿಂತಿರುಗಿದರಂತೆ ಕೆಲಸಕ್ಕೆ.

ಹೀಗ್ಯಾಕಾಯಿತು ಎಂದು ವಿಚಾರಿಸಿದೆ. ಗಿರಣಿ ಕಾರ್ಮಿಕರ ಸಂಘದ ನಾಯಕನಿಗೆ ಕೊಕ್ಕು ಕೊಟ್ಟು ಇನ್ನೊಬ್ಬ ಯುವಕ ಅಧ್ಯಕ್ಷನಾಗಿದ್ದನಂತೆ ತನ್ನ ಸಾಹಸ ತೋರಿಸಲು ಅವನು ಸರಿಯಾದ ಕಾರಣಗಳನ್ನು ತೋರಿ ಮುಷ್ಕರ ಹೂಡಿ ಸಿದ್ದನಂತೆ. ಮುಷ್ಕರ ಜಯಪ್ರದವಾಗುವ ಸೂಚನೆಗಳೂ ಇತ್ತಂತೆ.

ಆಗ ಮಾಜಿ ನಾಯಕ ಕುತಂತ್ರಕ್ಕೆ ಶುರುಮಾಡಿ, ಕಾರ್ಮಿಕರ ಮನೆಗಳಿಗೆ ಹೋಗಿ ಹೆಂಗಸರನ್ನೆಲ್ಲಾ ಪುಸಲಾಯಿಸಿ, ಗಂಡಸರಿಗೆ ಕುಡಿಯುಕ್ಕೆ ಕಾಸು ಕೊಟ್ಟು, ಮುಷ್ಕರದ ಬೆನ್ನುಮೂಳೆಯನ್ನೇ ಮುರಿದನಂತೆ.

ಇದನ್ನು ಕೇಳಿದಾಗ ಪುಸ್ತಕದಲ್ಲಿ ಓದಿದ್ದರ ಕತೆ ನೆನಪಾಯ್ತು.

ಒಂಟಿಯಾಗಿ ಹಿಂಡು ಬಿಟ್ಟು ಹೋದ ಸಲಗ ಏನಾಯ್ತು, ತಿನ್ನೋದನ್ನ ತುಳಿದುಹಾಕಿ, ಕಂಡಿದ್ದನ್ನು ಕೆಡವುತ್ತಾ, ಊರು ಕೇರಿಯವರೆಲ್ಲರೂ ಆನೆಗಳಮೇಲೆ ರೇಗಿ ಬೀಳೋಹಾಗೆ ಮಾಡಿ, ತನ್ನ ಹಳೆ ಹಿಂಡಿನ ಅಪಯಶಸ್ಸು ಹಾಗೂ ಅಪಾಯಕ್ಕೆ ಕಾರಣವಾಯ್ತು.

ಅರೆ! ಇದೇನೋ ಆ ಕತೆ ನೀತಿ ಅಂತ ಪುಸ್ತುಕ ತೆರೆದು ನೋಡಿದೆ. ಒಂಟಿ ಸಲಗನ ಹಾವಳೀನ ವಿಶದೀಕರಿಸುತ್ತಾ..

ಕಾಡಿನಲ್ಲಿ ಮೃಗಗಳು ಹೇಗೆ ಸಮಾಜ ಜೀವನ ನಡೆಸುತ್ತೋ ಅದೇ ರೀತಿ ನಾಡಿನಲ್ಲಿ ನಾಗರೀಕ ಮನುಷ್ಯರು ಕೂಡ, ಮನಃ ಪೂರ್ವಕವಾಗಿ ಅದೇ ರೀತಿ ಬಾಳು ನಡೆಸುತ್ತಿದ್ದಾರೆ ಎಂದು ಬರೆದಿತ್ತು.

ಎಲ, ಎಲಾ! ಹೌದಲ್ಲಾ ಎಂದುಕೊಂಡೆ.

ಕುಲಕ್ಕೆ ಶತ್ರು ಕೊಡಲಿ ಕಾವು—

ಈ ಮಾಜಿ, ಜಾತಿಯವರೆಲ್ಲಾ ಹೀಗೇನೇನೋ?

ಕಟ್ಟೌಟ್ ಹಾಕಿ ಕೂರಿಸಿದರು

ರಸ್ತೇಲಿ ಹೋಗ್ತಾ ಇದ್ದ ರಾಮು. ಬಿದ್ದ. ಮಂಡಿ ತರಕೊಂಡ. ಮಂಡೇಗೆ ಪೆಟ್ಟು ಬಿತ್ತು. ಸೈಕಲ್‌ಮೇಲೆ ಹೋಗ್ತಾ ಇದ್ದ ಮೋಹನ ಇದನ್ನು ನೋಡಿದ. ಇಳಿದ. ರಾಮುನ ಶಿಷ್ರೂಷೆ ಮಾಡಿದ. ಇದನ್ನು ಕಂಡೋರೆಲ್ಲ ಎಂತ ಒಳ್ಳೆಯ ವನು ಮೋಹನ, ಎಂದು ಹೊಗಳಿದರು. ಮೋಹನನನ್ನು ಕಂಡಾಗ ಲೆಲ್ಲರಾಮು ಅವನನ್ನ ತೋಳುಗಳಲ್ಲೇ ಕಟ್ಟಿಹಾಕಿಕೊಳ್ತಿದ್ದ.

ಚುನಾವಣೆ ಬಂತು. ಕಟ್ಟೌಹಾಕಿದರು ಮೋಹನನನ್ನ. ನೀನೇ ನಮ್ಮ ಪ್ರತಿನಿಧಿ ಅಂದರು. ಪ್ರಜಾಸಭೆಗೆ ಹೋದ. ಎರಡು ಒಳ್ಳೇ ಮಾತಾಡಿದ. ಅವ ರೆಲ್ಲರೂ ಸೇರಿದರು. ಕಟ್ಟೌಹಾಕಿದರು. ನೀನೇ ಮಂತ್ರಿಯಾಗು ಅಂತ ಹಠ ಹಿಡಿದರು.

ಮಂತ್ರಿಯಾದ. ಒಂದು ನಿಮಿಷ ಕೆಲಸ ಮಾಡುಕ್ಕೆ ಬಿಡೆಲಿಲ್ಲ ಅವನನ್ನ. ಕಟ್ಟೌಹಾಕಿ ಹಿಡಿಕೊಂಡು ಹೋಗಿ ಬೆಳಗಿಂದ ಸಂಜೆತನಕ ಉದ್ಘಾಟನೆಗಳನ್ನು ಉದ್ಯಾಪನೆಗಳನ್ನು ಮಾಡಿಸಿದರು. ಅವಧಿ ಮುಗಿದಾಗ ನಾನೇನು ಮಾಡಿದೆ ಅಂತ ನೋಡಿದ ಮೋಹನ. ಏನೂ ಸಾಧಿಸಿರಲಿಲ್ಲ.

ಬೇಜಾರು ಬಂತು. ಸತ್ತುಹೋದ ಕೊರಗಿನಲ್ಲಿ.

ಅಲ್ಲಿಗೂ ಜನ ಬಿಡಲಿಲ್ಲ. ದೊಡ್ಡದಾಗಿ ಅವನ ತೈಲಚಿತ್ರ ಬರೆಸಿದರು. ಅದಕ್ಕೆ ಕಟ್ಟೌ ಹಾಕಿ ಕೂರಿಸಿದರು.

ಕಟ್ಟೌ ಬಿಡಿಸಿಕೊಳ್ಳಲು ಸತ್ತರೂ ಸಾಧ್ಯವಾಗಲಿಲ್ಲ. ಪಾಪ!

ಗಾಂಪರು ಮಹಿಳಾ ಸಮಾಜದಲ್ಲಿ !

ಲೇಖಕಿ : ಟಿ. ಸುನಂದಮ್ಮ

[ವಿದೇಶ ಯಾತ್ರೆಗೆ ಹೋಗಿರುವ ಗಾಂಪರು ಇಲ್ಲೆಲ್ಲಿ ಬಂದರೆಂದುಕೊಂಡಿರಾ? ಅವರು ಯಾತ್ರೆ ಹೊರಡುವ ಮುನ್ನಿನ ಸಮಾಚಾರ ಇದು ;]

ಎಂತೆಂತಹ ಸಮಾರಂಭಕ್ಕೂ ಇಲ್ಲದ್ದು, ಅವತ್ತು ಆ ಮಹಿಳಾ ಸಮಾಜದ ಒಳಾಂಗಣ ಹೊರಾಂಗಣಗಳೆರಡೂ ಭರ್ತಿ ಆಗಿದ್ದಕ್ಕೆ ವಿಶೇಷ ಕಾರಣವಿತ್ತು. ಆ ದಿನ, ಗುರು ಗಾಂಪರು, ತಮ್ಮ ಶಿಷ್ಯ ಚತುಷ್ಟಯದೊಂದಿಗೆ, ಮಹಿಳಾ ಸಮಾಜಕ್ಕೆ ಭೇಟಿ ಕೊಡುವರಿದ್ದರು. ಎಲ್ಲರೂ ಕಾತುರರಾಗಿ ಕೊಕ್ಕರೆ ಕತ್ತು ನೀಡಿ ನೋಡುತ್ತಿರುವಾಗ, ಗಾಂಪ ಮಠದ ಮೂವತ್ತೇಳನೇ ಇಸವಿ ಮಾಡಲ್ ಮಾರಿಸ್ ಕಾರಿನ ಟಾಪು ತೆಗೆದು ಕೂತು—ಪ್ರವಾಹ ನಿಧಿಗೆ ಧನ ಸಂಗ್ರಹಕ್ಕೆ ಹೊರಟ ಸಿನಿಮಾ ನಟರಂತೆ—ಗುರು ಶಿಷ್ಯರು ಆಗಮಿಸಿದರು. ಮರುಳ mascotನ ಹಾಗೆ, ಬಾನೆಟ್ಟಿನ ಮೇಲೆ ಕೂತುಬಿಟ್ಟಿದ್ದ !

ಸಮಾಜದ ಅಧ್ಯಕ್ಷಿಣಿ, ಉಪಾಧ್ಯಕ್ಷಿಣಿ ಮತ್ತು ಕಾರ್ಯಕಾರೀ ಸಮಿತಿಯವರು ಅವರನ್ನು ಆದರದಿಂದ ಸ್ವಾಗತಿಸಿದರು. ಹುಡುಗಿಯರಿಬ್ಬರು, ಗುರುಗಳಿಗೆ ತಿಲಕವಿಟ್ಟು ಆರತಿ ಎತ್ತಿದರು. ಮಡ್ಡಿ, ಗುರುಗಳ ಕಿವಿಯಲ್ಲಿ ಹೇಳಿದ, "ಆರತಿ ತಟ್ಟೆಗೆ ಕಾಣಿಕೆ ಹಾಕಬೇಕು ಗುರುಗಳೇ !" ಎಂದು. ಗುರುಗಳು, ಕೋಶಾಧ್ಯಕ್ಷನಾದ ಮುಠ್ಠಾಳನ ಕಡೆ ತಿರುಗಿ, ತಮ್ಮ ಸ್ಥಾನಗೌರವಕ್ಕೆ ತಕ್ಕಂತೆ ಬಾಯಿ ತೆರೆಯದೆ, ಕೈನಲ್ಲೇ ಸನ್ನೆ ಮಾಡಿ, ಎರಡು ಬೆರಳುಗಳನ್ನು ತೋರಿಸಿದರು. ಸೂಕ್ಷ್ಮಮತಿಯಾದ ಮುಠ್ಠಾಳ, ಅವರ ಆಜ್ಞೆಯನ್ನ ಶಿರಸಾವಹಿಸಿ, ನಿಲುವಂಗಿ ಜೇಬಿನಿಂದ ಎರಡು ನಯೇಪೈಸೇ ತೆಗೆದು ತಟ್ಟೆಗೆ ಹಾಕಿದ ! ಗುರುಗಳ ಮುಖ ......ನೀಲಿಯಾಯ್ತು !....ಅವರರ್ಥ ಎರಡು ರೂಪಾಯಿ ಹಾಕೆಂದು.

ಗುರುಗಳಿಗೆ ಇದ್ದಕ್ಕಿದ್ದ ಹಾಗೇ ಉಸಿರು ಹಿಡಿದು, ಮುಖ ಕಪ್ಪಿಟ್ಟದ್ದನ್ನು ಕಂಡ ಅಧ್ಯಕ್ಷಿಣಿ ಗಾಭರಿ ಆಗಿ, ಗಾಂಪರೊಡೆಯರನ್ನೂ, ಶಿಷ್ಯರನ್ನೂ, ಒಳಕ್ಕೆ ಕರೆದುಕೊಂಡು ಹೋಗಿ, ಮೇಜಿನಮುಂದೆ ಕೂರಿಸಿದರು. ಉಪಾಧ್ಯಕ್ಷಿಣಿ ಸ್ವಹಸ್ತದಿಂದ ತಂಪಾದ ಪಾನೀಯವನ್ನು ತಂದಿಟ್ಟರು ; "ತೆಗೆದ್ಕೊಳ್ಳಿ ; ಆಯಾಸವಾಗಿರೋ ಹಾಗಿದೆ, ಬಿಸಿಲ್ನಲ್ಲಿ ಬಂದು" ಎಂದು ಉಪಚರಿಸಿದರು.

ಪಾನೀಯದ ಗ್ಲಾಸ್‌ನಲ್ಲಿದ್ದ ಕೊಳವೆಯನ್ನ ಕಂಡ ಮಂಕ, "ಇದ್ಯಾಕೋ ಈ ಕೊಳವೆ?" ಅಂದ ಮರುಳ, "ಕೆಳಗಿರೋ ಸಕ್ರೆ ಕದರ್‍ಕೊಳ್ಳಕ್ಕೆ" ಅಂದ. ಗುರುಗಳು, "ಥೂ ಮಂಕರಾ!" ಎಂದು ಅವರ ಹೆಸರಿನಲ್ಲೇ ಗದರಿಸುತ್ತ, ಪಾನೀಯವನ್ನು ಒಂದೇ ಗುಟುಕಿಗೆ ಕುಡಿದು, "ಇದಕ್ಕೇ, ಅದಿರೋದು—ಅಷ್ಟೂ ತಿಳಿಯೊಲ್ಲ!" ಎನ್ನುತ್ತ ಕೊಳವೆಯಲ್ಲಿ ನಾಲಗೆಯನ್ನ ಚೆನ್ನಾಗಿ ಕೆರೆದುಕೊಂಡರು. ಅಲ್ಲಿದ್ದ ಮಹಿಳಾಮಣಿಯರು, ಒಬ್ಬರ ಮುಖ ಒಬ್ಬರು ನೋಡಿಕೊಂಡು, ದಾಕ್ಷಿಣ್ಯದಿಂದ ಸುಮ್ಮನಿದ್ದರು.

ಗುರುಗಳಿಗೂ ಶಿಷ್ಯರಿಗೂ ಆರಾಮವಾದ ಮೇಲೆ, ಅಧ್ಯಕ್ಷಿಣಿ ಅವರನ್ನ ಸಮಾಜದ ವಿವಿಧ ಚಟುವಟಿಕೆಗಳನ್ನು ತೋರಿಸಲು ಕರೆದುಕೊಂಡು ಹೊರಟರು. ಒಂದು ಕೊಠಡಿಯಲ್ಲಿ ಹಿಂದೀ ತರಗತಿ ನಡೆಯುತ್ತಿತ್ತು. ಮಡ್ಡಿ ಅಲ್ಲಿದ್ದ ಹೆಂಗಸರನ್ನು ನೋಡಿ, "ಇದೇನ್ರಪಾ ಅನ್ಯಾಯ! ಅಜ್ಜೀರು ಮುತ್ತಜ್ಜೀರೆಲ್ಲ ಈ ವಯಸ್ನಲ್ಲಿ ಪಾಠ ಕಲೀತಿದಾರೆ!" ಅಂದ. ಪ್ರಾಥಮಿಕದ ಕ್ಲಾಸು ಅದು—"ವ್ಹೈ ಹೂಂ, ತುಂ ಹೋ, ಏಹ್ ಹೈ" ಎಂದು ಹೇಳಿಕೊಡುತ್ತಿದ್ದರು. ಮುಠ್ಠಾಳ ಕೊಠಡಿಯಿಂದ ಹೊರಕ್ಕೆ ಬರುತ್ತಲೇ "ಏನು ಮಹಾನ್ಸೋ ಈ ಹಿಂದೀ! ನನಗಾಗಲೇ ಬಂದೇಬಿಡ್ತು—"ವ್ಹೈ ಹೈ, ತುಂ ಹೂಂ, ಏಹ್ ಹಹ್"—ಪ್ರಾಸಬದ್ಧವಾಗಿ ಜೋಡಿಸಿಬಿಟ್ರೆ ಆಯ್ತು" ಎಂದ. ಗುರುಗಳು "ಹುಶ್‌ಶ್" ಎಂದರು.

ಅಲ್ಲಿಂದ ಮುಂದಕ್ಕೆ ವಾಚನಾಲಯ. ಗಾಜಿನ ಬೀರುಗಳಲ್ಲಿ ಸಾಲು ಸಾಲಾಗಿ ಜೋಡಿಸಿದ್ದರು ಪುಸ್ತಕಗಳನ್ನು. ವಾಚನಾಲಯದ ಮೇಲ್ವಿಚಾರಕಿ, ಪುಸ್ತಕಗಳನ್ನು ಹಂಚೋ ವಿಧಾನ, ನಿಯಮ, ಎಲ್ಲ ವಿವರಿಸಿದರು. ಗುರುಗಳು, "ಒಬ್ಬರು ಕೊಂಡ್ಕೊಂಡ ಪೇಪರ್ನ್ನ ಹನ್ನೆರಡು ಜನ ಹರಡಿಕೊಂಡು ಓದ್ತಿವಲ್ಲ, ಹಾಗೇನೇ—ಒಬ್ಬರು ಕೊಂಡುಕೊಂಡ ಪುಸ್ತಕಾನ ನೂರಾರು ಜನ ಓದಬಹುದು!" ಎಂದು ಮಹೋಪಮೇಯ ಕೊಟ್ಟು, ತಲೆದೂಗಿದರು. "ಇನ್ನೂ ಒಂದು ಮುಖ್ಯವಾದ ಅನುಕೂಲ ಗುರುಗಳೇ. ಒಂದೊಂದು ಪುಸ್ತಕ ತೊಗೊಂಡಾಗ, ಒಂದೊಂದು ಹಾಳೆ ಕಿತ್ಕೊಂಡರೆ ಸಾಕು: ಗಣೇಶನ ಮಂಗಳಾರತಿ ಕಡ್ಡಿ ಪೊಟ್ಟಣಕ್ಕೆ ಕಾಗದಕ್ಕೆ ತಡಕಾಡೋ ತಾಪತ್ರಯ ಇರುಲ್ಲ!" ಎಂದ ಮಂಕ. ಮಹಿಳೆಯರು ಮುಸಿಮುಸಿ ನಕ್ಕರು.

ಗಣ್ಯ ವ್ಯಕ್ತಿಗಳನ್ನ, ಸಮಾಜದ ಕೈಕಾರಿಕಾ ವಿಭಾಗಕ್ಕೆ ಕರೆದೊಯ್ಯಲಾಯ್ತು. ಚಿತ್ತದ ಕೆಲಸ, ಹೊಲಿಗೆ, ಕಸೂತಿ, ಕುಶಲಕಲೆ, ಚಿತ್ರಕಲೆ, ಇವೆಲ್ಲ ನಡಿಯುತ್ತಿರುವುದನ್ನು ಒಂದೊಂದಾಗಿ ನೋಡಿದ್ದಾಯ್ತು. ಕೊನೆಗೆ, ಸಮಾಜದಲ್ಲಿ ತಯಾರಾದ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿದ್ದ ಕೊಠಡಿಗೆ ಬಂದರು. ಗಾಂಪ ಮಠದ ಗುರುಗಳಾಗಿದ್ದು, ಇಲ್ಲಿ ಏನಾದರೂ ಖರೀದಿ ಮಾಡದಿದ್ದರೆ, ತಮ್ಮ ಗೌರವಕ್ಕೆ ಕುಂದು ಅನ್ನುವುದನ್ನು ತಿಳಿದಿದ್ದ ಗುರುಗಳು, "ಒಳ್ಳೇಪದಾರ್ಥಗಳನ್ನ ಮೂರು ನಾಲ್ಕು

ಆರಿಸಿ ತೊಗೊಳ್ಳಿ; ಅದರ ಬೆಲೇನ ಕೊಟ್ಬಿಡಿ" ಎಂದು ಶಿಷ್ಯರಿಗೆ ಪಿಸುಗುಟ್ಟಿದರು. ಅವರು ಹಾಗೆಯೇ, ಚೆನ್ನಾಗಿ ಕಂಡ ಕೆಲವು ಸಾಮಾನುಗಳನ್ನು ಆರಿಸಿ, ಒಂದು ಕಡೆ ಇಟ್ಟರು. ಸ್ವತಃ ಗುರುಗಳೇ ಅವರಿಗೆ ತುಂಬಾ ಸುಂದರವೆನಿಸಿದ ವಸ್ತುವೊಂದನ್ನು ತೆಗೆದಿರಿಸಿದರು. ಅಷ್ಟರ ಬೆಲೆಯನ್ನೂ ಕೊಟ್ಟದ್ದಾಯ್ತು; ಹೊರಡುವಾಗ ತೆಗೆದುಕೊಂಡು ಹೋಗುವುದೆಂದು ಒಂದು ಕಡೆ ಇಟ್ಟದ್ದಾಯ್ತು.

ಮಹಿಳಾ ಸಮಾಜದಲ್ಲಿ ಸದಸ್ಯೆಯರ ಅನುಕೂಲಕ್ಕೆ ಆಟಪಾಟಗಳ ಏರ್ಪಾಟೂ ಇತ್ತು. ಮಹಿಳೆಯರಿಬ್ಬರು ಟೆನ್ನಿಸ್ ಆಡುತ್ತಿದ್ದರು. ಗುರು ಶಿಷ್ಯರು ನೋಡುತ್ತ ನಿಂತರು. ಆಡುತ್ತಿದ್ದ ಮಹಿಳೆಯರು ಜೋರಾಗಿ ಸ್ಕೋರ್ ಮಾಡುತ್ತಿದ್ದರು. ಒಬ್ಬಾಕೆ, "Love all" ಅಂದಳು. ಪ್ರತಿಯಾಕೆ, "Love fifteen" ಅಂದಳು. ಮರುಳ "ಅಯ್ಯೋ ಪಾಪ!" ಅಂದ!...."Love thirty" "Forty Love" ಹೀಗೇ ಸಾಗುತ್ತಿದ್ದ ಇವರ ಕೂಗನ್ನು ಕೇಳಿ ಲೊಚಗುಟ್ಟುತ್ತಿದ್ದ ಮರುಳ, "ಪಾಪ, ಇವರಿಗೆ ಮದುವೆ ಆಗಲೇಬೇಕು ಗುರುಗಳೇ. ಇಬ್ಬರೂ 'ಲವ್ ಲವ್' ಅಂತ ವದ್ದಾಡುತ್ತಿದಾರೆ!" ಅಂದ. (ಹೈಸ್ಕೂಲು ಮೆಟ್ಟಲು ಹತ್ತಿದ್ದ ಅವನಿಗೆ ಸ್ವಲ್ಪ ಇಂಗ್ಲಿಷ್ ಅರ್ಥವಾಗುತ್ತಿತ್ತು). "ಹಾಗಂತೀಯಾ?" ಎಂದು ಸಿಂಪತೈಸಿದರು ಗುರುಗಳು. "ಹೌದು ಗುರುಗಳೇ. ನಮಗಂತೂ ಬ್ರಂಹ್ಮಚರ್ಯೆ ದೀಕ್ಷೆ ಕೊಟ್ಟು ಬಿಟ್ಟಿದೀರಿ. ಆದರೆ, ನಮ್ಮ ಮಠದ ಕಿರಿಶಿಷ್ಯರಾದ ಮೊದ್ದ, ಪೆದ್ದರಿಗೆ ಯಾಕೆ ಇವರನ್ನ ಗಂಟುಹಾಕಬಾರದು?" ಸಲಹೆ ಕೊಟ್ಟ ಬೃಹಸ್ಪತಿ ಶಿಷ್ಯ!....ಇದನ್ನ ಕೇಳುತ್ತಿದ್ದ ಉಪಾಧ್ಯಕ್ಷಿಣಿ ನಕ್ಕು, "ಅವರಿಬ್ಬರಿಗೂ ಮದುವೆ ಆಗಿದೇಪ್ಪ. ಟೆನ್ನಿಸ್ ಆಟದ ಲೆಖ್ಖ ಹಾಗೇ ಎಣಿಸೋದು" ಅಂದರು.

ಗುರು ಶಿಷ್ಯರ ಗೌರವಾರ್ಥವಾಗಿ, ಮನರಂಜನೆ ಕಾರ್ಯಕ್ರಮ ಏರ್ಪಡಿಸಿದ್ದರು. ಸದಸ್ಯೆಯೊಬ್ಬರು ಹಿರಿಯ ಸಾಹಿತಿಯ ಕವನವೊಂದನ್ನು ಹಾಡತೊಡಗಿದಾಗ, "ಯಾಕೆ ಗುರುಗಳೇ ಆಕೆ ಹಾಗೆ ಅಳ್ತಿದಾಳೆ?" ಅಂದ ಮಂಕ. 'ಹುಶ್ ಶ್' ಎಂದು ಹುಬ್ಬುಗಂಟಿಕ್ಕಿದರು ಗುರುಗಳು—ಟೆನ್ನಿಸ್ ಕೋರ್ಟ್ ಘಟನೆ ಅವರಿಗೆ ಅವಮಾನವಾಗಿತ್ತು! "ಮಠದ ಆರಾಧನೇಲಿ ನಾವು ಆಡಬೇಕೆಂದಿರೋ 'ನಾರದ-ನಾರದಿ' ನಾಟಕಕ್ಕೆ ಪಾರ್ಟ್ ಮಾಡೋರು ಇಲ್ಲಿ ಮಸ್ತಾಗಿ ಸಿಕ್ತಾರೆ ಕಣೋ!" ಅಂದ ಮುಠ್ಠಾಳ. "ಹೇಗೆ?" ಅಂದ ಮಡೆಯ. "ನೆತ್ತೀ ಮೇಲೆ ನಾರದನ ಜಟೀ ಹಾಗೆ ಕೂದಲು ಕಟ್ಟಿರೋ ಹೆಂಗಸ್ರೆಷ್ಟು ಜನ ಇದಾರೆ ನೋಡು!" ಎಂದು ಎಲ್ಲರಿಗೂ ಕೇಳುವ ಹಾಗೆ ಮುಠ್ಠಾಳ ಪಿಸುಗುಟ್ಟಿದಾಗ, ಗುರುಗಳು ಬೆವರಿಟ್ಟರು.

ಸಂಗೀತವಾದ ಮೇಲೆ ನೃತ್ಯ—ಹತ್ತು ಹನ್ನೆರಡು ವರ್ಷವಿರಬಹುದು ಹುಡುಗಿಗೆ. ನೃತ್ಯ, ಭರದಿಂದ ಸಾಗಿರುವಾಗ, "ನಿಮ್ಮ ಕಟ್ಟಡದ ಅಡಿಪಾಯ ಭದ್ರವಾಗಿದೆಯೇನ್ರಮ್ಮೋ?" ಎಂದು ಜೋರಾಗಿ ಕೇಳಿದ ಮಡೆಯ!... ವಾಸ್ತವ ಸಂಗತಿ

ಏನೆಂದರೆ—ಹುಡುಗಿ ಅಧ್ಯಕ್ಷಿಣಿಯ ಏಕಮಾತ್ರ ಪುತ್ರನ ಏಕಮಾತ್ರ ಪುತ್ರಿ. ಹಾಲು ತುಪ್ಪದ ಹೊಳೆ ಕುಡಿದೇ ಬೆಳೆಯುತ್ತಿದ್ದಳು. ಆದರೆ, ಆ ಹಾಲು ತುಪ್ಪ, ಹುಡುಗಿಯನ್ನು ಉದ್ದುದ್ದಕ್ಕೆ ಬೆಳಸುವ ಬದಲು, ಅಡ್ಡಡ್ಡಕ್ಕೆ ಬೆಳೆಸಿತ್ತು! ಆದರೂ... ಮಡೆಯ ಹಾಗೆಂದಾಗ. ಅಧ್ಯಕ್ಷಿಣಿ ಮುಖ ಹುಳ್ಳಗಾಯಿತು!

ಭಾಷಣಗಳ ಸರದಿ. ಕಾರ್ಯದರ್ಶಿನಿ ಘನ ಅತಿಥಿಗಳ ಪರಿಚಯಮಾಡಿ ಕೊಟ್ಟು, ಗುರುಗಳು ತಮ್ಮ ಅಮೃತವಾಣಿಯನ್ನು ಅಪ್ಪಣೆ ಕೊಡಿಸಬೇಕೆಂದು ಕೇಳಿಕೊಂಡರು. ಗಾಂಪರೊಡೆಯರೆದ್ದು ನಿಂತು, "ಮಹಿಳೆಯರೇ ಮತ್ತು ಮಹನೀಯರೇ" ಎಂದು ಪ್ರಾರಂಭಿಸಿದಾಗ, ಸಭಿಕರು ಸಭ್ಯತೆಯಿಂದ ಇದುವರೆಗೂ ತಡೆದಿಟ್ಟಿದ್ದ ನಗು ಅಲೆ ಅಲೆಯಾಗಿ ಹೊರಟಿತು.....ಅಲ್ಲಿದ್ದ ಮಹನೀಯರೆಂದರೆ, ಮರುಳ, ಮುಠ್ಠಾಳರಿಬ್ಬರೇ. ಮಂಕ ಮಡೆಯರಿಗೆ ಅಭ್ಯಾಸವಿಲ್ಲದ ಪಾನೀಯದ ಸೇವನೆಯಿಂದ ಹೊಟ್ಟೆಯಲ್ಲಿ ಒಂದು ಬಗೆಯ ತಳಮಳ ಪ್ರಾರಂಭವಾಗಿ, ತಂಪು ಹವೆಯ ಸೇವನೆಗೆಂದು ಹೊರಾಂಗಣದಲ್ಲಿ ಓಡಾಡುತ್ತಿದ್ದರು. ಮರುಳ ಮುಠ್ಠಾಳರು ಜಯವಿಜಯರಂತೆ, ಗುರುಗಳ ಇರ್ಕೆಲದಲ್ಲೂ ವಿರಾಜಿಸುತ್ತಿದ್ದರು. ಅವರಾಗ, ನಿಜಕ್ಕೂ ದೇವಲೋಕದಲ್ಲೇ ಇದ್ದರು—ಯಾಕೆಂದರೆ, ಕಣ್ಮುಚ್ಚಿ ಲಕ್ಷಣವಾಗಿ ನಿಂತಲ್ಲೇ ತೂಕಡಿಸುತ್ತಿದ್ದರು!

ಗುರುಗಳು ಸಾವರಿಸಿಕೊಂಡು, ನಾಲ್ಕಾರು ಮಾತುಗಳಲ್ಲಿ ಭಾಷಣ ತೊಡಲಿದ ಮೇಲೆ, ಹುಡುಗಿಯೊಬ್ಬಳು ದೊಡ್ಡ ಹಾರವನ್ನು ಗುರುಗಳಿಗೆ ಹಾಕಲು ತಂದಳು. ಹೂವಿನ ಘಮಲಿಗೆ ಕಣ್ಣುಬಿಟ್ಟ ಮರುಳ—"ಯಾಕ್ರಮ್ಮಾ ಆ ಮಗೂ ಕೈಲಿ ಆ ಹಾರ ಹೊರಸ್ತೀರಿ? ಗುರುಗಳು ನಿಮ್ಮೆತ್ತರಕ್ಕೆ ಸರಿಯಾಗಿದಾರೆ, ನೀವೇ ಹಾಕಿಬಿಡಿ ಅವರ ಕೊರಳಿಗೆ ಮಾಲೇನ!"—ಎಂದು ಸಲಹೆ ಕೊಟ್ಟಾಗ, ಅವಿವಾಹಿತೆಯಾದ ಆ ಕಾರ್ಯದರ್ಶಿನಿ ಕೆಂಪಗಾದಳು.

ವಂದನಾರ್ಪಣೆಯಾಯ್ತು. ಗುರುಶಿಷ್ಯರನ್ನು ಎಲ್ಲರೂ ಆದರದಿಂದ ಬೀಳ್ಕೊಟ್ಟರು. ತಾವು ಆರಿಸಿಟ್ಟಿದ್ದ ಸಾಮಾನುಗಳನ್ನು ಒಬ್ಬೊಬ್ಬರ ಕೈಲಿ ಒಂದೊಂದನ್ನ ಹಿಡಿದು, ಸಮಾಜದ ಹೆಬ್ಬಾಗಿಲಿನಿಂದ ಹೊರಬಿದ್ದಾಗ, ನೆರೆದಿದ್ದ ಭಾರೀ ಜನ ಸಮೂಹ ಯಾಕೆ ಹಾಗೆ ಬಿದ್ದು ಬಿದ್ದು ನಕ್ಕಿತು ಎನ್ನುವುದು ಗಾಂಪರೊಡೆಯರಿಗೂ, ಶಿಷ್ಯವೃಂದಕ್ಕೂ, ಇವತ್ತಿನವರೆಗೂ ಬಗೆಹರಿಯದ ಸಮಸ್ಯೆಯಾಗೇ ಉಳಿದಿದೆ.

(ಅವರು ಸಮಾಜದಲ್ಲಿ ಆರಿಸಿದ್ದ ವಸ್ತುಗಳು—ಕ್ರೋಶೆಯಲ್ಲಿ ಹೆಣೆದ ಲಂಗದ ಲೇಸೊಂದು, ಅಂಗೈ ಅಗಲದ ಹೆಣ್ಣು ಕೈ ಚೌಕಗಳೆರಡು, ಬಟ್ಟೆಯ ಬೊಂಬೆಗಳೆರಡು! ಗುರುಗಳು ಸ್ವತಃ ಮೆಚ್ಚಿ ಆರಿಸಿ, ತಮ್ಮ ಕೈಲೇ ಹಿಡಿದು ಹೊರಟದ್ದು—ಕನ್ನಡಿ ಕಸೂತಿಮಾಡಿದ "ಜಂಭದ ಚೀಲ (Vanity bag)"!)

ಭಾವೈಕ್ಯ ಸಾಧನೆ

ಲೇಖಕ: ಶಿವರಾಮ ಕಾರಂತ

ಮೇಲಿನ ಶಿರೋನಾಮೆಯನ್ನು ಕಂಡು ಯಾರೂ ಬೆದರಬೇಕಾಗಿಲ್ಲ. ಯಾರು ಏನು ಹೇಳುವಂತಿದ್ದರೂ, ಜನಕ್ಕೆ ತಿಳಿಯುವ ವಿಷಯವನ್ನು, ತಿಳಿಯುವ ಭಾಷೆಯಲ್ಲಿ ಹೇಳಿದ್ದಾದರೆ, ಅವರಿಗೆ ನಮ್ಮ ಪಾಂಡಿತ್ಯ ಎಲ್ಲಿ ಗೊತ್ತಾಗುತ್ತದೆ? ನಾವು ಪಂಡಿತರು, ಅಸಾಮಾನ್ಯ ವ್ಯಕ್ತಿಗಳು, ಜನ ಸಾಮಾನ್ಯರಿಗಿಂತ ಅತ್ಯಪಾರ ಮೇಧಾವಿಗಳೆಂದು ನಮಗೇ ಗೊತ್ತಿದ್ದಮೇಲೆ, ಅಂಥ ವ್ಯಕ್ತಿಗೆ ತಕ್ಕ ಭಾಷೆ ಬೇಡವೇ? ನಾವು ಹೇಳುವುದು ಜನಸಾಮಾನ್ಯರಿಗೆ-ಎಂದಮೇಲೆ, ಹೇಳುವವನ ಮಟ್ಟ ಬಹಳ ಎತ್ತರದ್ದು; ಕೇಳುವವರು ಅಲ್ಪಬುದ್ಧಿಯವರು, ಏನೂ ಬುದ್ಧಿಯಿಲ್ಲದವರು, ಅಥವಾ ವಿಚಾರಶಕ್ತಿಯೇ ಇಲ್ಲದವರು-ಎಂದು ಊಹಿಸಿಯೇ-ಹೊರಡುತ್ತೇವೆ. ಅದಕ್ಕೆ ತಕ್ಕ ವೇಷ ಹಾಕಬೇಡವೇ? ನಾವು ಹೇಳಲಿರುವ ವಿಷಯ ಸಾಮಾನ್ಯವೆಂದು, ಇತರರಿಗೆ ಪೂರ್ವ ಸೂಚನೆ ದೊರೆತರೆ "ಅದನ್ನೇನು ಹೇಳುತ್ತೀ? ಬಿಡು" ಎಂದಾರು ಮೂರ್ಖ ಜನ. ಹೇಳಲಿರುವ ವಿಷಯ ಬಹಳ ದೊಡ್ಡದು, ಅಗಾಧವಾದದ್ದು,-ನಮ್ಮ ತಲೆಯನ್ನೂ ಕೆಡಿಸಿ, ನಿಮ್ಮ ತಲೆಯನ್ನೂ ಕೆಡಿಸುವಂಥಾದ್ದು-ಎಂಬ ಭ್ರಮೆಯನ್ನು ಹುಟ್ಟಿಸಬೇಕಾದುದು, ಲೋಕೋಪದೇಶಿಗಳಾದ ನಮ್ಮ ಪ್ರಥಮ ಕರ್ತವ್ಯ. ಹಾಗೆ ಭ್ರಮೆ, ಪೂರ್ವ ನಿರೀಕ್ಷಣೆಗಳನ್ನು ಕಲ್ಪಿಸಿದರೇನೆ ಜನ ಕೇಳುತ್ತಾರೆ. ಬರಿದೆ ಅವರು ಕೇಳುತ್ತಿರಬೇಕೇ, ಹೊರತು ಎದುರು ಮಾತನಾಡಬಾರದು, ಟೀಕಿಸಬಾರದು, ಪ್ರಶ್ನಿಸಬಾರದು. ಹಾಗೆ ಅವರಲ್ಲಿ ಸಂಶಯವೋ ಪ್ರಶ್ನಾರ್ಥಕ ಬುದ್ಧಿಯೋ ಉತ್ಪನ್ನವಾದರೆ 'ಇವನೇನು ಮಹಾ!' ಎನ್ನುತ್ತಾರೆ. ಅವಿಧೇಯತೆಗೆ ಅದು ಎಡೆಕೊಡುತ್ತದೆ. ಅವಿಧೇಯರನ್ನಾಗಲೀ ಸಂಶಯಗ್ರಸ್ತರನ್ನಾಗಲೀ ನಡೆಯಿಸಿಕೊಂಡು ಹೋಗುವುದಾಗಲಿ, ಆ ಮೂಲಕ ರಾಷ್ಟ್ರ ಕಟ್ಟುವುದಾಗಲಿ, ಧರ್ಮ ಕಟ್ಟುವುದಾಗಲೀ ಸಾಧ್ಯವೇ? ಎಲ್ಲಿಯ ತನಕ ಜನಗಳ ಸಲುವಾಗಿ, ನಾವು ವಿಚಾರಮಾಡುವ ಯಾವತ್ತು ಅಧಿಕಾರವನ್ನು ಇರಿಸಿಕೊಂಡಿದ್ದೇವೆಯೋ, ಅಲ್ಲಿಯ ತನಕ ಜನರು ಪ್ರಶ್ನೆ, ಸಂಶಯ, ಸಂದಿಗ್ಧಗಳಿಗೆ ಎಡೆಕೊಡಬಾರದು. ನಾವು ಹಗಲೆಂದರೆ ಅವರೂ ಹಗಲೆನ್ನಬೇಕು. ನಾವು ರಾತ್ರೆಯೆಂದರೆ ಕೂಡಲೆ ಮಲಗಿ ನಿದ್ರಿಸಬೇಕು. 'ರಾತ್ರಿಯಲ್ಲ, ಸೂರ್ಯ ಕಾಣಿಸುತ್ತಾನಲ್ಲ' ಎಂದು ಒಬ್ಬ ಅಧಿಕ ಪ್ರಸಂಗಿ ಹೇಳಿದರೆ "ಮೂರ್ಖಾ, ಇದು ಉತ್ತರ ಧ್ರುವ"-ಎಂದು ಅವನ ಬಾಯಿ ಕಟ್ಟಬೇಕು. ಹಾಗೆಂದರೇನೆಂದು, ಆತ

ದಕ್ಷಿಣಕ್ಕೆ ಮುಖ ಮಾಡಿ, ತಲೆ ಕೆರೆದುಕೊಳ್ಳಬೇಕು. ಇಷ್ಟೆಲ್ಲ ವಾಕ್‌ಸಂಪತ್ತು, ತರ್ಕ ಸಂಪತ್ತು ನಮ್ಮಲ್ಲಿಲ್ಲದೆ ಹೋದರೆ, ಲೋಕಕಲ್ಯಾಣ ಸಾಧಿಸುವುದು ಸಾಧ್ಯವೇ?

ನಾವು ಭಾರತೀಯರು. ಆ 'ಎಮ್ಮೆ' ನಮಗೆ ಬೇಡವೇ? ಭಾರತ ನಡೆದದ್ದು ರಾಮಾಯಣವಾದಮೇಲೆ. ಆ ಭಾರತ ಯುದ್ಧವನ್ನು ಗೆದ್ದವರಾರು? ಯಾತರಿಂದ? ಇವನ್ನೆಲ್ಲ ಯೋಚಿಸಿ ನಿಮಗೆ ಈ ಲೇಖನದ ಶಿರೋನಾಮೆ ಮರೆತು ಹೋದರೂ ಚಿಂತಿಲ್ಲ, ತತ್ಕಾಲಕ್ಕೆ ನಮಗೆಲ್ಲ ಬಂದಿರುವ ಪ್ರಜಾಪ್ರಭುತ್ವದ ಈ ದುಸ್ಸಂಧಿಯಲ್ಲಿ ಚೆನ್ನಾಗಿ ಯೋಚಿಸಿ. ಶ್ರೀ ಕೃಷ್ಣನ ರಾಜಕೀಯ ಚಾಣಾಕ್ಷತನದಿಂದಲ್ಲವೆ ಭಾರತಯುದ್ಧವನ್ನು ಗೆದ್ದುದು. ಆ ಸತ್ಯ ನಿಮಗೆ ಹೊಳೆಯಲಿ, ಹೊಳೆಯದಿರಲಿ ನೀವು ಆ ಮಾತನ್ನು ಒಪ್ಪಿದರೆ ಮುಂದಿನ ವಿಚಾರಕ್ಕೆ ಹೋಗಬಹುದು.

ಭಾವೈಕ್ಯಸಾಧನೆ– ಭಾವ + ಐಕ್ಯ + ಸಾಧನೆ. ಭಾರತ ದೇಶ ಐಕ್ಯವಾಗಿರಬೇಕೇ ಬೇಡವೇ? ಐಕ್ಯದ ಸಾಧನೆ ನಮಗೆ ಬೇಕೇ ಬೇಕು. ಅದು ಯಾವುದರಿಂದಾಗುತ್ತದೆ? ಭಾವದಿಂದ. ನೀವು ಐಕ್ಯವಾಗಿದೆ ಎಂದರೆ ಸರಿ. "ಆಗಿಲ್ಲ, ನನಗೂ ಅವನಿಗೂ ಭಿನ್ನಾಭಿಪ್ರಾಯವಿದೆ, ಯಾವಾವುವೋ ವಿಷಯಗಳಲ್ಲಿ" ಎಂದು ತಿಳಿದರೆ, ಆಗ ಐಕ್ಯ ಭಂಗವಾಯಿತು. ನಮ್ಮ ದೇಶದಲ್ಲಿ ಈ ಹಾಳು ಪ್ರಜಾಪ್ರಭುತ್ವ ಬಂದಮೇಲೆ, ನಾವು ಹೇಳುವ ಒಂದೇ ಒಂದು 'ಇಸುಮು'ನ್ನು (Ism) ಬಿಟ್ಟು, ಇತರ ಅನೇಕ ಇಸುಮುಗಳ ಹಾವಳಿ ಹೆಚ್ಚಿ ಐಕ್ಯ ಕೆಡುತ್ತಲಿದೆ ಎಂದು ನಮ್ಮ ಸಂಶೋಧಕರು ಕಂಡುಹಿಡಿದಿದ್ದಾರೆ. ಲಿಂಗ್ವಿಸಮ್, ಕಾಸ್ಟಿಸಮ್, ಕಮ್ಯೂನಿಸಂ, ಪ್ರಾಂತಿಸಮ್ ಇಂಥ ಅನೇಕ ಅಂಟು ರೋಗಗಳು ಹಬ್ಬುತ್ತಿವೆ. ಇದಕ್ಕೆ ನಮ್ಮ ಹೊಸ ಮಾದರಿಯ ಸೋಶಾಲಿಸಮು ಮಾತ್ರವೇ ಒಂದು ಆಕ್ಷೇಪ. ಇತರ ದೇಶಗಳ ಸೋಶಾಲಿಸಮುಗಳಂತೆ ನಮ್ಮಲಿಲ್ಲ. ನಮ್ಮದು ಹೊಸದು ಎಂದು ಟೀಕಿಸುವ ಅಧಿಕಾರ ಜನಕ್ಕಿಲ್ಲ. ಅದು ಹುಟ್ಟಿದೆಯಷ್ಟೇ, ಅದು ಇನ್ನು ಇನ್ನು ಇನ್ನಷ್ಟು ಬೆಳೆಯಬೇಕು; ಬೃಹದಾಕಾರ ತಾಳಬೇಕು. ಅದಕ್ಕೆ ಕೊಂಬು, ಕವಲುಗೊಂಬು ಮೂಡಬೇಕು, ಹುಟ್ಟಿದ ಕೂಸನ್ನು ಹುಟ್ಟಿದ ಮೂರು ದಿನಗಳಲ್ಲೇ ಯಾರಾದರೂ ಟೀಕಿಸುತ್ತಾರೆಯೇ? ನಮ್ಮ ಸೋಶಾಲಸಮು ಮಾತ್ರ ಶೈಶವದಲ್ಲಿದೆ; ಅದನ್ನು ಸಾರುವ ನಾವಲ್ಲ; ಆ ನಾವು ಜ್ಞಾನ ಪ್ರಬುದ್ಧರು.

ನಮ ನಿಮಗೂ ಗೊತ್ತಿರುವ ಕಾಸ್ಟಿಸಮು ಇದೆಯಷ್ಟೆ. ಅದನ್ನು ನಾವು ನಮ್ಮಲ್ಲಿ ಬಿಟ್ಟು, ಅನ್ಯರಲ್ಲಿ ಚೆನ್ನಾಗಿ ಗುರುತಿಸಬಲ್ಲೆವು. ಅನ್ಯರಲ್ಲಿರುವ ಅಂಥ ಗುಣ ದೇಶಕ್ಕೆ ಹಾನಿ ತಂದೇ ತರುತ್ತದೆ. ಆದುದರಿಂದಲೇ ಅಂಥ ವಿಧ್ವಾಂಸಕರ ಪ್ರವೃತ್ತಿಯನ್ನು ನಾಶಮಾಡುವ ಸಲುವಾಗಿ ಜಾತಿ, ಮತ, ಭಾಷೆ, ಪ್ರಾಂತ

ಮೊದಲಾದ ಗುಂಪುಗಳನ್ನು ಕಟ್ಟಿ, ಚಳವಳಿ ನಡೆಸುವವರನ್ನು ಶಾಸನಕ್ಕೆ ಗುರಿಪಡಿಸಬೇಕಾಗಿದೆ. ಇದಕ್ಕೆ ಸೇರದಿರುವ ಒಂದೇ ಒಂದು ಅತ್ಯವಶ್ಯಕವಾದ ಕಲಮು ವರ್ಗವಿದ್ವೇಷ. ಬಂಡವಾಳಗಾರರು, ಮಜೂರರು, ಭೂಮಾಲಕರು, ರೈತರು ಇಂಥ ಗುಂಪುಗಳ ದ್ವೇಷ, ಸಮಾಜ ಕ್ಷೇಮಕ್ಕೆ, ಅಥವಾ ಮುಂಬರುವ ಹೊಸ ಮಾದರಿಯ ಸೋಶಾಲಿಸಮಿಗೆ, ಅತ್ಯವಶ್ಯಕವಾದುದು ಎಂದು ಮನಗಂಡು 'ವರ್ಗಕಲಹ'ವನ್ನು ಈ ಶಾಸನದಿಂದ ಹೊರತುಪಡಿಸಿದ್ದೇವೆ.

ಜನಗಳಲ್ಲಿ ಭಾವೈಕ್ಯ ಆಗಬೇಕಾದುದು ಅನಿವಾರ್ಯ, ಇದು ಯಾವ 'ಭಾವ?' ಇಲ್ಲಿ ಸ್ವಲ್ಪ ಕಷ್ಟ ಬರುತ್ತದೆ. ನಾವಿದಕ್ಕೆ ಇಂಗ್ಲೀಷ್ ಭಾಷೆಗೆ ಶರಣು ಹೋಗಬೇಕಾಗುತ್ತದೆ, 'ಇಮೋಶನಲ್ ಇಂಟಿಗ್ರೇಷನ್' ಎಂಬ ಉಕ್ತಿಯಿಂದ ನಿಮಗೆ ಶಬ್ದದ ಅರ್ಥ ಸಾಕಷ್ಟು ಸೂಚನೆಯಾದೀತು. ಸ್ಥಾಯಿಭಾವ ಇದಲ್ಲ; ಸಂಚಾರೀ ಭಾವ, ನಾಟಕಕಾರರು ಹೇಳುವಂತೆ ಭಾರತದ ನಾಲ್ವತ್ತು ಕೋಟಿ (ಮತ್ತು ಮುಂದೆ ಹುಟ್ಟಲಿರುವ ಕೋಟಿ) ಜನಗಳು ಐಕ್ಯಮತದಿಂದ ಇದ್ದಾರೆ ಎಂದು ಕಾಣಿಸಬೇಕಾದರೆ ಎಲ್ಲರೂ ಒಂದೇ ಕಾಲದಲ್ಲಿ, ಒಂದೇ ದೇಶದಲ್ಲಿ, (ನಾವು ತಪ್ಪಿ ಹುಟ್ಟಿದ ಈ ಭಾರತದಲ್ಲಿ) ಒಂದೇ ವಿಷಯಕ್ಕಾಗಿ ಅಳಬೇಕು, ನಗಬೇಕು, ರೇಗಬೇಕು, ರೌದ್ರವತಾರ ತಾಳಬೇಕು. ಭಯಗೊಳ್ಳುವುದಾದರೂ ಸರಿಯೆ. ಈ ನಾಲ್ವತ್ತು ಕೋಟಿ (ಮುಂದಿನ ಮರಿಗಳು) ಏಕಕಾಲಕ್ಕೆ ಹಾಹಾಕಾರ ಎಬ್ಬಿಸಬೇಕು.

ಉದಾಹರಣೆ:—

ಇದು ನಿಮ್ಮ ಮನೆಯೆಂದು ತಿಳಿಯಿರಿ. ಮನೆಯಲ್ಲಿ ತುಂಬ ಜನ ಗಂಡಸರೂ ಹೆಂಗಸರೂ ಇನ್ನೂ ಇದ್ದಾರೆ ಬದುಕಿ; ಮೀಸೆ ಬಂದ ನೀವೂ, ಮೀಸೆಬಾರದ ಹೆಂಗಸರೂ ಇವರನ್ನು ಬಿಟ್ಟು ಮನೆಯಲ್ಲಿ ಚಿಕ್ಕ ಮಕ್ಕಳಿಲ್ಲ ಎಂದು ಕಾಣಿಸಿ, ಆಗ ನಿಮ್ಮ ಹೆಂಡತಿಯೋ, ತಂಗಿಯೋ ಹಡೆದು ಒಂದು ಮಗುವಾಯಿತು ಎಂದೆಣಿಸಿ; ಅಂಥ ಸಂದರ್ಭದಲ್ಲಿ ಮನೆಯ ನೀವೆಲ್ಲರೂ ಕೂಡಿ (ಹೆತ್ತವಳನ್ನ ಬಿಟ್ಟು) ಹಿರಿ ಹಿರಿ ಹಿಗ್ಗುವುದಿಲ್ಲವೇ? ನಗುವುದಿಲ್ಲವೇ? ಸಂತೋಷಗೊಳ್ಳುವುದಿಲ್ಲವೇ ಭಾವೈಕ್ಯದಿಂದ.

ಅದೇ ಉದಾಹರಣೆ, ಅದೇ ಜನ, ಅದೇ ಸಂಸಾರ, ಅದೇ ಸಂತೋಷದಲ್ಲಿದ್ದೀರಿ, ಭಾವೈಕ್ಯದಿಂದ. ನಮ್ಮ ಇಷ್ಟೊಂದು ಐಕ್ಯಮತವನ್ನರಿಯದ ವಿಧಿ ನಮ್ಮ ಮಗುವಿನ ಪ್ರಾಣವನ್ನು ತೆಗೆದುಕೊಂಡು ಹೋದ ಎಂದು ಎಣಿಸಿ ಆಗ ನೀವೆಲ್ಲ "ಗೋಳೋ" ಎಂದು ಅಳುವುದಿಲ್ಲವೇ? ಭಾವೈಕ್ಯದಿಂದ. ಇಲ್ಲ; ಆ ಮಗು ಸಾಯಲಿಲ್ಲ. ಬದಲು ಮಕ್ಕಳನ್ನು ಕದಿಯುವ ಬೈರಾಗಿಯೊಬ್ಬ ಬಂದು, ಅದನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದಾನೆ. ಎಂದು ಎಣಿಸಿ; ಆಗ ನೀವೇನು ಮಾಡುತ್ತೀರಿ? ದೊಣ್ಣೆ ಹಿಡಿದುಕೊಂಡು, ಅವನನ್ನು ಬೆನ್ನಟ್ಟಿಕೊಂಡು ಹೋಗಿ

ನಿಮ್ಮ ಕೋಪತಾಪಗಳನ್ನೆಲ್ಲ ಪ್ರಕಟಮಾಡುತ್ತೀರಿ ಭಾವೈಕ್ಯದಿಂದ. ಅಖಿಲ ಭಾರತವೇ ಒಂದು ಸಂಸಾರ ಎಂಬುದನ್ನು ಯೋಚಿಸಿದ್ದೀರಾ? ಹಾಗೆ ಯೋಚಿಸಿದ್ದಾದರೆ ನಮ್ಮಲ್ಲಿ ಸಂಪೂರ್ಣ ಭಾವೈಕ್ಯ ಇರಬೇಡವೇ? ಅಷ್ಟರಮಟ್ಟಿಗಾದರೂ ವಿಶ್ವದ ಅನ್ಯದೇಶಗಳಿಂದ, ಜನಗಳಿಂದ, ನಾವು ಬೇರೆಯ ವ್ಯಕ್ತಿಗಳು ಎಂದು ತಿಳಿಯಬೇಡವೇ? ನಮ್ಮನ್ನು ಕಂಡು, ಜಗತ್ತಿನ ಇತರ ದೇಶಗಳು ಪ್ರೇರಿತವಾಗಿ, ಇದೇ ಪಾಠ ಕಲಿಯಬೇಡವೇ? ಹಿಂದೆ ಈ ಭಾರತ ದೇಶವೇ, ಲೋಕ ನಿದ್ರಿಸುತ್ತಿದ್ದಾಗ, ಅದಕ್ಕೆ ಮಾರ್ಗದರ್ಶನ ಮಾಡಿತ್ತು. ಈ ನಾವು ನಿದ್ರಿಸಿದರೂ ಲೋಕಕ್ಕೆ ಮಾರ್ಗದರ್ಶನ ಮಾಡುವ ಹೊಣೆ ನಮ್ಮದಿಲ್ಲವೇ?

"ಯಾವ ಶಕ, ಯಾವ ವರ್ಷದಲ್ಲಿ ನಾವು ಲೋಕಕ್ಕೆ ಮಾರ್ಗದರ್ಶನ ಮಾಡಿದ್ದು?" ಎಂದು ಪ್ರಶ್ನೆ ಕೇಳಬೇಡಿ. ಅದರಿಂದ ಭಾವೈಕ್ಯಕ್ಕೆ ವಿರಸ ಉಂಟಾಗುತ್ತದೆ. ಅಥವಾ ಲೋಕದ ಅನ್ಯದೇಶದ ಜನಗಳು ತಾವು ಸಹ ಜಗತ್ತಿಗೆ ಮಾರ್ಗದರ್ಶನ ಮಾಡಿದ್ದೇವೆ, ಅಂದರೆ ಅದನ್ನು ನಂಬಬೇಡಿ.

ದುರ್ದೈವಕ್ಕೆ ನನ್ನ ಲೇಖನವನ್ನು ಕನ್ನಡದಲ್ಲಿ ಬರೆಯುತ್ತಿರುವುದರಿಂದ, ಅಲ್ಪಸ್ವಲ್ಪ ಕನ್ನಡ ಓದಿಕೊಂಡ, ಆದರೂ ತಾನು ಹೆಚ್ಚು ಬುದ್ಧಿವಂತನೆಂದು ತಿಳಿದುಕೊಂಡ, ಒಬ್ಬ ವ್ಯಕ್ತಿ ಹೀಗೆನ್ನಬಹುದು-

"ಸರಿಯೇ, ನಿಮ್ಮ ಉದಾಹರಣೆಗಳನ್ನು ಒಪ್ಪಿದೆ. ಭಾವೈಕ್ಯಕ್ಕೆ ನೀವು ಕೊಟ್ಟ ನಿದರ್ಶನಗಳನ್ನು ಒಪ್ಪಿದೆ. ಆದರೆ ಅದೆಲ್ಲ ಒಂದು ಕುಟುಂಬಕ್ಕೆ ಅನ್ವಯಿಸುವ ಮಾತಾಯಿತು. ಭಾರತ ದೊಡ್ಡ ದೇಶ. ಅದರಲ್ಲಿ ಕೋಟಿಗಟ್ಟಲೆ ಕುಟುಂಬಗಳಿವೆ" ಎಂದಾನು.

ಆತನಿಗೆ ಇನ್ನೂ ನಮ್ಮ ಮುಂದಿನ ಯೋಜನೆಗಳು ತಿಳಿದಿಲ್ಲ. ಕುಟುಂಬ ಯೋಜನೆಗಳಿವೆ; ಸಂತತಿಯೋಜನೆಗಳಿವೆ: ಎಲ್ಲರನ್ನೂ ಸರಿಸಮರನ್ನಾಗಿ, ಸಮಗಾತ್ರದವರನ್ನಾಗಿ ಮಾಡುವ ದೈತ್ಯ ಯೋಜನೆಗಳಿವೆ. ಚೀನದಲ್ಲಿ ಮಾಡಿಲ್ಲವೇ? ಸಣ್ಣ ಸಣ್ಣ ಕುಟುಂಬಗಳ ಹಗ್ಗಗಳನ್ನೆಲ್ಲ ಕಿತ್ತು, ಚೀನಾಕ್ಕೆ ಚೀನಾವೇ ಒಂದು ಸಂಸಾರವಾಗಿಲ್ಲವೆ? ಅಲ್ಲಿ ಬಂದಿರುವ ಕ್ಷಾಮಕ್ಕಾಗಿ ಜನರೆಲ್ಲ ಐಕ್ಯಭಾವದಿಂದ ಒಮ್ಮೆಗೇ ಅಳುತ್ತಲಿಲ್ಲವೇ? ಇಲ್ಲೂ ಹಾಗಾಗುವ ದಿನ ಬಹಳ ದೂರವಿಲ್ಲ. ಆದರೂ, ಈಗ ಕೇಳುವ ಪ್ರಶ್ನೆಗೆ ಉತ್ತರ ಕೊಡಬೇಕಲ್ಲ. ಕಂಗೆಡಬೇಡಿ. "ನಿಜ; ಈಗ ಸದ್ಯಕ್ಕೆ ಸಾವಿರಾರು ಬೇರೆ ಬೇರೆ ಕುಟುಂಬಗಳಿವೆ. ಆದುದರಿಂದ ಭಾವೈಕ್ಯ ಸಾಧನೆ ಬೇಡ ಎನ್ನುತ್ತೀರಾ?" ಎಂದು ಆತನನ್ನು ಕೇಳಿ.

ಆತ ಮೆಲ್ಲಗೆ ಹಲ್ಲು ಕಿರಿಯುತ್ತಾ "ನಾವು ಯಾವ ಮಗು ಸತ್ತಿತೆಂದು, ಅಥವಾ ಹುಟ್ಟಿತೆಂದು ಅಥವಾ ಅಪಹೃತವಾಯಿತೆಂದು ನಗಬೇಕು; ಅಳಬೇಕು, ಸಿಟ್ಟಾಗಬೇಕು ?" ಎಂದು ಕೇಳಬಹುದು. ಈಗಾಗಲೇ ಕೇಳುವಷ್ಟು, ಹುಂಬತನ ವನ್ನು, ಮೊಂಡುತನವನ್ನು ಪ್ರಕಟಮಾಡಿಲ್ಲ. ಮುಂದೆ ಮಾಡಬಾರದೆಂದಿಲ್ಲ. 'ಎಲ್ಲರನ್ನೂ ಒಂದೇ ತೆರನ ಭಾವಕ್ಕೊಯ್ಯಬೇಕಾದರೆ, ಎಲ್ಲರಿಗೂ ಅನ್ವಯಿಸುವ ಒಂದು ತಿಳಿದ ವಿಷಯ ಬೇಕಾಗುತ್ತದೆ.' ಎಂಬ ಸಂಶಯ ಕೆಲವರಿಗೆ ಬಂದೀತು. ಅಂಥ ಅನುಮಾನದಿಂದಲೇ ಅವನು ಕೇಳಬಹುದು. ಆಗ ಅವನನ್ನು ಉತ್ತರಿಸು ವುದಕ್ಕೆ ತುಸು ಎಚ್ಚರ ಬೇಕಾಗುತ್ತದೆ. ಹಿಂದೆ ಭಾರತಕ್ಕೆ ಪಾರತಂತ್ರ್ಯ ಬಂದಿತ್ತು. ಅದು ಗೊತ್ತಿದ್ದವರೆಲ್ಲ ಅತ್ತರು; ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು-ಆ ಸುದ್ದಿ ಸಿಕ್ಕಿ ದೊಡನೆಯೇ ನಕ್ಕರು: ಸಿಕ್ಕಿ ಹದಿನಾಲ್ಕು ವರ್ಷಗಳು ಸಂದಮೇಲೆ ಇನ್ನು ಇನ್ನು ನಗಬೇಕೆಂದರೆ ತುಂಬ ಕಷ್ಟ. ಮೊದಲು ಅಳು, ಅನಂತರ ನಗು ಎರಡು ಕೆಲಸ ಭಾವೈಕ್ಯದಿಂದ ಮಾಡಿದೆವು. ಮುಂದಿನ ಸರದಿ ಕೋಪದ್ದು. ನಮ್ಮ ನಮ್ಮಲ್ಲೇ ಕೋಪಗೊಂಡರೆ ಭಾವೈಕ್ಯಕ್ಕೆ ವಿರೋಧ. ಬೈರಾಗಿಯಮೇಲೆ ಕೋಪ ತಾಳಿದಂತೆ ಅನ್ಯರಮೇಲೆ ನಾವು ಕೋಪ ತಾಳಬೇಕು. "ಯಾವ ಮಗು ಕದ್ದು ಹೋಯಿತು ?" ಎಂದು ಕೇಳಿಯಾನು ಆತ. "ಲೋಕ ನಮ್ಮ ಮಾತನ್ನು ಕೇಳುತ್ತಲಿಲ್ಲ" ಎಂಬು ದರಿಂದ, ನಾವು ಭಾವೈಕ್ಯದಿಂದ ಕೋಪಿಷ್ಟರಾಗಬಹುದಷ್ಟೆ. ಅಂಥ ಕಾರಣ ಸಾಲದೆ ಹೋದರೆ ನಮ್ಮ ಯೋಜನೆಗಳಿಗೆ ಬೇಕಾಗುವಷ್ಟು ಕೋಟಿ, ಅಬ್ದ ರೂಪಾಯಿ ಗಳನ್ನು ಹೊರಗಿನ ಜನ ಕೊಡುತ್ತಲಿಲ್ಲ ಎಂದು ಕೋಪಿಸಬಹುದು. ಕೊಟ್ಟರೂ ಹಿಂದೆ ಕೇಳುವ ದುರ್ಬುದ್ಧಿಯಿಂದ ಕೊಡುತ್ತಿದ್ದಾರೆ. ಹಣ ಕೊಡುವವರೂ ಅದಕ್ಕೆ ಹಗ್ಗ ಕಟ್ಟಿ ಕೊಡುತ್ತಾರೆ. ಇದಕ್ಕಾಗಿಯೂ ಕೋಪ ತಾಳಬಹುದು.

ನಮ್ಮ ಜನಕ್ಕೆ ಒಂದು ತೊಂದರೆಯಾಗಿದೆ ನೋಡಿ. ಅವರನ್ನೇ ಈ ಹಣಕ್ಕಾಗಿ ಕೇಳಿದರೆ, ಸಾಲ, ತೆರಿಗೆ, ಮೊದಲಾದ ರೂಪಗಳಿಂದ ಕೇಳಿದರೆ ಭಾವೈಕ್ಯದಿಂದ ಸಿಟ್ಟಾಗುತ್ತಾರೆ. ಇದು ತಪ್ಪು. ಅನ್ಯರಿಂದ ತಂದ ಹಣವನ್ನು ಈ ದೇಶದಲ್ಲಿ ಈ ವರ್ಷದ ಮಳೆಗಿಂತ, ಹೆಚ್ಚಾಗಿ ಸುರಿದು ಖರ್ಚು ಮಾಡಿದರೂ ಜನರಿಗೆ ಕೃತಜ್ಞ ತೆಯೇ ಬರುವುದಿಲ್ಲ—ಹಣ ತಂದವರಾರೆಂದು. ಅಂಥವರನ್ನು ಕಟ್ಟಿಕೊಂಡು ನಾವು ಕೆಲಸ ಮಾಡಬೇಕಾಗಿದೆ. ಜನ ಅಜ್ಞಾನಿಗಳು; ಆದುದರಿಂದಲೇ ಅವರಿಗೆ ಹೇಳ ಬೇಕು "ನೋಡಿ ಅಮೆರಿಕದವರು ಇಷ್ಟು ಬಿಲಿಯ ಬಿಲಿಯ ಡಾಲರು ಸಂಪಾದಿಸು ತ್ತಿದ್ದಾರೆ. ಫೋರ್ಟ್ ನಾಕ್ಸ್‌ನಲ್ಲಿ ಇಷ್ಟು ಚಿನ್ನ ಹೂತಿದ್ದಾರೆ. ಪಶ್ಚಿಮ ಜರ್ಮನಿಯ ಆದಾಯ, ಸ್ವೀಡನ್ನಿನ ಆದಾಯ ಇಷ್ಟು ಬಿಲಿಯ ಮಾರ್ಕ್ ಇಲ್ಲವೆ ಕ್ರೋನರ್. ಜಾಪಾನಿನ ವರಮಾನ ಇಷ್ಟು ಬಿಲಿಯ ಯೆನ್. ಆ ಜನರು ತಮ್ಮ ವರಮಾನದ ಅರ್ಧದಷ್ಟಾದರೂ ಭಾರತಕ್ಕೆ ಕೊಡಬೇಡವೇ? ಬದಲು ಹತ್ತು,

ಎಂಟು, ಒಂದು, ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಲೋ ಕೊಡಬೇಡವೋ ಎಂಬ ಮನಸ್ಸಿನಿಂದ ಕೊಡುತ್ತಿದ್ದಾರೆ. ಇದು ನಾವು ಭಾವೈಕ್ಯದಿಂದ ಅಸಮಾಧಾನ ತಾಳಿ ಕೋಪಾವಿಷ್ಟರಾಗಬೇಕಾದ ಸಂದರ್ಭವಲ್ಲವೇನು? ಇಂಥ ದುರ್ನಡತೆಯ ಸಲುವಾಗಿ ನಾವು ಜತೆಗೂಡಿ ಕೋಪಿಸಿಕೊಳ್ಳಬೇಕು.

ಈ ಉದಾಹರಣೆಗೆ ನಿಮ್ಮ ಶ್ರೋತಾರ ತಲೆದೂಗಲೇಬೇಕು. ಆದರೆ ಆ ಆಸಾಮಿ, ನಿಮ್ಮ ಇದಿರಿನ ರಾಜಕೀಯ ಪಕ್ಷದವನಾದರೆ, ಅದರಲ್ಲಿಯೂ ಹುಳುಕನ್ನ ಹುಡುಕಬಹುದು. ಈಚೀಚಿನ ಕೆಲವರು ಅರ್ಥಶಾಸ್ತ್ರ, ಪಾಲಿಟಿಕ್ಸ್ ಓದಿಕೊಂಡು, ಬೇಡದ ಮಾತುಗಳನ್ನೆಲ್ಲ ಆಡುತ್ತಿದ್ದಾರೆ. ಅಂಥವರ ಮುಂದೆ ಹೇಳುವಾಗ ನೀವು ಬೇರೆಯೇ ಉದಾಹರಣೆ ಕೊಡುವುದು ಉಚಿತ.

ನೋಡಿ, ಬೇರೆ ಯಾರೂ ಕಂಡು ಹಿಡಿಯದ ಒಂದು ವಿಷಯವಿದೆ. ಅದೆಂದರೆ 'ಲಿಪಿ'. ಈ ಶಬ್ದದಿಂದ ನಿಮ್ಮ ಮನಸ್ಸು ಬ್ರಹ್ಮಲಿಪಿಯ ಕಡೆಗೆ ಹರಿದೀತು. ಅದೇನೂ ತಪ್ಪಲ್ಲ. ಬ್ರಹ್ಮ ಲೋಕದ ಐಕ್ಯಸಾಧನೆಗಾಗಿ ಒಂದೇ ಲಿಪಿಯಿಂದ ಎಲ್ಲರ ಹಣೆಯ ಮೇಲೂ ಬರೆದಿದ್ದಾರೆ. ಬ್ರಹ್ಮಲಿಪಿ ಎಲ್ಲರ ಮನಸನ್ನು ಭಾವೈಕ್ಯದಲ್ಲಿ ಮುಳುಗಿಸಬಲ್ಲ ಒಂದು ಲಿಪಿ. ಸದರಿ ಬ್ರಹ್ಮ, ಗೀರ್ವಾಣಿಯ ಗಂಡ, ಅವನು ಕಲಿತ ಲಿಪಿ, ಹೆಂಡತಿ ಹೇಳಿಕೊಟ್ಟ ಗೀರ್ವಾಣಲಿಪಿ. ಅದೇನೆಂದು ಪ್ರಶ್ನಕಾರ ಕೇಳಿಯಾನು. ಗೀರ್ವಾಣ ಲಿಪಿಯೇ ದೇವನಾಗರಿ. ಅದನ್ನು ಬಲ್ಲವರು ಬ್ರಹ್ಮಲಿಪಿಯನ್ನು ಓದಬಹುದು. "ಅದನ್ನೋದುವುದರಲ್ಲಿ ನಿಸ್ಸೀಮರಾಗಿ" ಎಂದು ಉಪದೇಶ ಮಾಡಿ ಆ ಲಿಪಿಯನ್ನೊಪ್ಪಿದರೆ ಮಾತ್ರ ನಮ್ಮ ಪ್ರಜಾಜನ ಉದ್ಧಾರವಾದೀತು; ಪ್ರಜಾಪ್ರಭುತ್ವ ನಮ್ಮ ಒಡೆತನದಲ್ಲಿ ಸಾರ್ಥಕವಾದೀತು.

ನೀವು ಈ ಬಗ್ಗೆ ಜರುಗಿಸುವ ಸಭೆಗಳಲ್ಲಿ ಇಷ್ಟೊಂದು ವಿಷಯ ಹೇಳಿದಮೇಲೆ ಮುಂದಿನ ಪ್ರಶ್ನೆಗಳಿಗಾಗಿ ಕಾದು ನಿಂತಿರಬಾರದು. ಕೆಡಿಲಾಕ್ ಕಾರಿನಲ್ಲಿ ಕುಳಿತು, ಮುಂದಿನ ಊರಿನಲ್ಲಿ ಭಾಷಣವಿದೆಯೆಂದು ಹೇಳಿ, ಹೊರಟುಹೋಗಲೇಬೇಕು. ಇಲ್ಲವಾದರೆ ರೇಡಿಯೋ ಭಾಷಣವನ್ನು ಮಾತ್ರ ಮಾಡಿ ಆಗ ಶ್ರೋತಾರನ ಪ್ರಶ್ನೆ, ನಿಮಗೆ ಕೇಳಿಸುವುದಿಲ್ಲ. ಇಲ್ಲದೆ ಹೋದರೆ ಒಂದು ಅಡಚಣೆ ಬರುವ ಸಂಭವವಿದೆ. ದೇಶಘಾತಕರ ಮನೋಧರ್ಮ ನಿಮಗೆ ತಿಳಿಯದು. ನಮಗೂ ತಿಳಿದಿರಲಿಲ್ಲ, ಇಲ್ಲದೆ ಹೋದರೆ ಭಾರತ ಸಂರಕ್ಷಣೆಯ ಕಾಯಿದೆಯಲ್ಲಿ ಲಿಪಿ ವಿಚಾರದ ಭಿನ್ನಾಭಿಪ್ರಾಯ, ಅರ್ಥಾತ್ ಲಿಪಿಫರಸ್ ಟೆಂಡೆನ್ಸಿಯ ಬಗ್ಗೆ ಒಂದು ಕಲಮನ್ನು ಸೇರಿಸಬಹುದಿತ್ತು.

ಮುನ್ನೆಚ್ಚರಿಕೆಯಿಂದ ನಿಮ್ಮ ಪ್ರತಿಕಕ್ಷಿಯು, ತನ್ನ ಬತ್ತಳಿಕೆಯಿಂದ ತೆಗೆಯಬಹುದಾದ ಬಾಣವನ್ನು ಕುರಿತು ಹೇಳುತ್ತೇನೆ. ಆತ ಹೇಳಿಯಾನು ಹಿಂದಿ, ಮರಾಠಿಗಳಿಗೆ ಒಂದೇ ಲಿಪಿಯಿದೆ. ಏನಾಯಿತು? ಒಂದೇ ಲಿಪಿಯ ಮರಾಟರಿಗೆ ಎರಡು ಪ್ರಾಂತ ಬೇಕಂತೆ. ಯಾಕೆ? ಗುಜರಾಥಿ, ಬಂಗಾಲೀ, ಹಿಂದೀಲಿಪಿ ಸಾಮ್ಯವುಳ್ಳ ಪ್ರಾಂತ್ಯಗಳಲ್ಲಿ ಏನಾಗಿದೆ? ಹೋಗಲಿ ಲೆಟಿನ್ ಲಿಪಿಯುಳ್ಳ ನಾರ್ವೆ, ಸ್ವೀಡನ್, ಜರ್ಮನಿ, ಸ್ವಿಟ್ಸರ್ಲೇಂಡ್, ಸ್ಪೈನ್, ಫ್ರಾನ್ಸ್, ಇಂಗ್ಲೆಂಡ್, ಕೆನಡಾ, ಯು. ಎಸ್. ಎ., ಲೆಟಿನ್ ಅಮೇರಿಕ, ಟರ್ಕಿಗಳಿಗೆ ಏಕ ಲಿಪಿಯಿದ್ದರೂ, ಕಾದಾಡುತ್ತಿದ್ದಾರೆಯೇಕೆ? ಎಂದು ಕೇಳಬಹುದು.

ಅಂಥವರಿಗೊಂದೇ ಉತ್ತರ. ಅನ್ಯದೇಶೀಯರ ಹಣೆಯಮೇಲೆ ಬ್ರಹ್ಮ ಏನೂ ಬರೆದಿಲ್ಲ. ಆತ ಬರೆದದ್ದು ಭಾರತೀಯರಾದ ನಮ್ಮ ಹಣೆಯಮೇಲೆ. ಅದು ಗೀರ್ವಾಣ ಇಲ್ಲವೇ ದೇವನಾಗರಿ ಲಿಪಿಯಲ್ಲಿ. “ಕೇಳುವ, ಬುದ್ಧಿಯಿದ್ದರೆ ಕೇಳಿ, ಇಲ್ಲವಾದರೆ ಹಾಳಾಗಿ ಹೋಗಿ” ಎನ್ನಿ.

ಭಾವೈಕ್ಯಸಾಧನೆಗೆ ಕಾರಣ ಸಿಕ್ಕಿದರೂ ಆ ಗುರಿ ಮುಟ್ಟುವುದಕ್ಕೆ ಕಾಲ ಬೇಕೇ ಬೇಕಾದೀತು ಆ ಕಾಲ ಇನ್ನೂ ಬಂದಿಲ್ಲ ಎಂದು ಕಾಣುತ್ತದೆ. ಆದರೂ ಕಾತರಗೊಳ್ಳುವುದು ಬೇಡ. ಆ ಕಾಲನಿಗೂ ಕಾದು ಕಾದು ಬೇಸರ ಬಂದು, ಆತ ನಾವಿದ್ದಲ್ಲಿಗೆ ಬಂದಾನು ಒಂದು ದಿನ.



ಹೋದ ಸಾರ್ತಿ ಚುನಾವಣೇಲಿ ಯಾವ ಊರ್ನಿಂದ ಗೆದ್ ಬಂದೆ ಅನ್ನೋದೆ ಮರೆತೇ ಹೋಗಿದೆ. ಅದ್ದರಿಂದ ಈ ಸರ್ತಿ ಬೇರೆ ಜಾಗ ನೋಡ್ಬೇಕಾಗಿದೆ.

ಶೇಂಗಾಸೊಟ್ಟ್ಕೆ ಸೀಜನ ಚಾಲೂ ಅದೆ!

(ಸಿಂಗದಾಣಿ ತಯ್ಯಾರ ಅವೆ)

—:o:—

ಬೇಡಿಕೊಂಬೆ ನಾನಿರಲಿ ಎಂದಿಗೂ ನೋಡ ಮಿಂಚುಗೂಡಿ

—ಕಾಳಿದಾಸ.

Seno'r ನೀನು ಭಾಗ್ಯಶಾಲಿ! ಮಳೆಯ ಕಾಟವಿರಲಿಲ್ಲ; ತಂಗಾಳಿ ಬೀಸುತ್ತಿತ್ತು. ಹೊಂಬಿಸಿಲನ್ನೆರಚುತ್ತಾ ಸೂರ್ಯ ಪಶ್ಚಿಮ ದಿಗಂತವನ್ನು ಮುಟ್ಟಲಿದ್ದ; ನಿನ್ನ ಮನದನ್ನೆಯ ಗುಲಾಬಿಕೆನ್ನೆಯಮೇಲೆ ಬಿಸಿಲು ಬಿದ್ದಿತ್ತು: ಅವಳು ಸುಪ್ರೀತಳಾಗಿ ನಿನ್ನ ಕಡೆ ತಿರುಗಿ ನಗುತ್ತಿದ್ದಳು. ಮತ್ತು ನೀನು O, Seno'r.

ನಿನ್ನ ಭಾಗ್ಯ ನನಗಿಲ್ಲ. ನಮ್ಮ ಹಣೆಯಲ್ಲಿ ಆ ದಿನ ನಗುನಗುತ್ತಿರುವುದು ಬರೆದಿರಲಿಲ್ಲ. ಅವಳಿಗೆ ಹೇಳಿದೆ "ಬಾ ಸಿನಿಮಾಕ್ಕೆ ಹೋಗೋಣ" ಎಂದು. ಅವಳು ಹುಸಿ ಮುನಿಸು ತೋರಿ ನೀವು ಸಿನಿಮಾಕ್ಕೆ ಕರೆದುಕೊಂಡು ಹೋಗುವುದು ನನಗೆ ಗೊತ್ತಿಲ್ಲವೇ?" ಎಂದಳು. ಅಷ್ಟರಲ್ಲಿ ಯಾರೋ ಹೊರಗಿನಿಂದ ಒದರಿದರು; "ರಾಯರೇ, ರಾಯಾ, ರಾಯ ಲೇ, ಯೋ ರಾಯಾ," ಇನ್ನಾರೂ ಅಲ್ಲ ಇವ, ನನ್ನ ಮಿತ್ರ, ಹಾಗೂ ಧಣಿ— ಮುಗಿಲುಹಳ್ಳಿ ಪರಮೇಶ್ವರಪ್ಪನವರು ಅಥವಾ ಪರ್ಮೇಶಿ. "ಅಂಬ್ರದಗೆ ಅಡ್ಡಗಡ್ಡಿ" ಎನ್ನುತ್ತಾರೆ; ಹಾಗೆ ಇವನು.

ಅವನು ನನ್ನನ್ನು ಹೀಗೆ ಅನುಸರಿಸುತ್ತಿರುವುದಕ್ಕೆ ಒಂದು ಕಾರಣವಿದೆ. ಇನ್ಕಂ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, ಟರ್ನೋವರ್ ಟ್ಯಾಕ್ಸ್ ಇತ್ಯಾದಿಗಳು ಏನೇನಿದ್ದರೂ ಅವನ್ನೆಲ್ಲಾ ಹತ್ತುಸಾವಿರ ಗಟ್ಟಲೆ ಕೊಡಬೇಕೆಂದು ನನ್ನ ಈ ಗೆಳೆಯ ತೀರ್ಮಾನಿಸಿದ್ದಾನೆ. ಅದನ್ನೆಲ್ಲಾ ಕೊಡುವ ವಿಧಾನ ಅವನಿಗೆ ಗೊತ್ತಿದೆ. "ನೀನು ಸುಮ್ನೆ ಜತ್ಗಿರು" ಎಂದು ನನಗೆ ಅವನ ಕಟ್ಟಾಜ್ಞೆ.

ಈಗ್ಗೆ ಇಪ್ಪತ್ತು ದಿವಸಗಳ ಕೆಳಗೆ Seno'r, ನೀನೂ, Seno'rita ನೂ ಪಿಕ್‌ನಿಕ್ ಹೋಗಿರಲಿಲ್ಲವೇ? ಪ್ರಕೃತಿ ಪ್ರಸನ್ನತೆ ಹೊಂದಿತ್ತು. ಹೊಲಗದ್ದೆಗಳು ಹಸಿರಾಗಿದ್ದವು. ನಿನ್ನ ಪ್ರೇಮ ಕೂಡಾ ಹಚ್ಚ ಹಸಿರಾಗಿತ್ತು.

ಆದರೆ ಗೆಳೆಯಾ, ನಿನಗೆ ನಂದನದ ಹಸಿರಿನಂತೆ ಕಂಡುಬಂದ ಆ ಹೊಲದಲ್ಲಿ ಶೇಂಗಾ (ಕಡಲೆಕಾಯಿ) ಗಿಡ ಹುಲುಸಾಗಿದ್ದಂತೆ ತೋರಿದರೂ, ಕಾಯಿಗಳು ಬಲಿತಿರಲಿಲ್ಲ. ಮೊನ್ನೆ ಮೊನ್ನೆ ಆ ಹೊಲದ ಕಾಯಿ ಮಾರಾಟಕ್ಕೆ ಬಂದಾಗ ಒಂದು ಕ್ವಿಂಟಲಿಗೆ ಇಪ್ಪತ್ತೆಂಟು ರೂಪಾಯಿ ರೇಟು ಸಹಾ ಸಿಕ್ಕಲಿಲ್ಲ. ನೀನೇನೋ ಆ ಹೊಲವನ್ನು ನಂದನವೆಂದು ನಿನ್ನ ಪ್ರೇಮಗೀತೆಯಲ್ಲಿ ವರ್ಣಿಸಿದೆ. ಆದರೆ ಬೊಂಬಾಯಿಯ ಶೇಂಗಾರಾಜ ಮಿಶ್ರೀಮಲ್ ಹರಕ್‌ಚಂದ್ ಅದೇ ಶೇಂಗಾವನ್ನು "ದಲಿಂದರ್" ಎಂದ. ಅಭಿಪ್ರಾಯ ಭೇದಗಳಿರುವುದು ಸಹಜ ತಾನೆ?

ಮಾನ್ಸಿಯರ್, ಆ ಪಿಕ್‌ನಿಕ್ ಮುಗಿಸಿ ನೀನು ಮರದ ನೆರಳಿನಲ್ಲಿ ನಿಲ್ಲಿಸಿದ್ದ ಕಾರಿನ ಬಳಿಗೆ mademoiselle ಅನ್ನು ಕರೆದುಕೊಂಡು ಬಂದು ನಿಂತೆಯಲ್ಲಾ, ಅದೇ ಸುಮಾರಿಗೆ ನಾನು ಸದರೀ ಮಿಶ್ರೀಮಲ್ ಹರಕ್‌ಚಂದನ ಬಾಗಲಕೋಟೆ ಬ್ರಾಂಚ್ ಅಂಗಡಿಗೆ ಬರೆದ ಕಾಗದವನ್ನು ಸ್ವಲ್ಪ ಸಹನೆಯಿಂದ ಓದು.

ಮಿಶ್ರೀಮಲ್ ಹರಕ್‌ಚಂದ ಸಾಕೀನ ಬಾಗಿಲಕೋಟೆ ಇವರಿಗೆ ಸದರಿಯವರು ಮಾಡುವ ಶರಣಾರ್ಥಿಗಳು.

ತರುವಾಯ ನಿಮ್ಮ ಪತ್ರವಿಲ್ಲ. ಮಜಕೂರ ತಿಳಿಯಲಿಲ್ಲ. ಸೇಂಗಾಸೊಟ್ಟೀ ಸೀಜನ ಚಾಲೂ ಆಗಲಿಕ್ಕೆ ಹತ್ತಿದೆ. ಆವಕ ಬಜಾರದಲ್ಲಿ ದಿನಾಲು 400–500 ಚೀಲ ಅದೆ. ಸಿಂಗದಾಣಿ ತಯ್ಯಾರ ಇಲ್ಲ. ಆದಾಗ್ಯೆ ತಿಳಿಸುತ್ತೇವೆ. ಹೋದ ವರ್ಷ ನೀವು ನಮಗೆ ಕೆಲಸ ಕೊಡಲಿಲ್ಲ ಹರಂತು, ಈ ವರ್ಷವಾದರೂ ಕೊಡ್ರೀ. ಪೀಕ ಮಜಬೂತ ಇಲ್ಲ ತಿಳೀರಿ. ಗಿರಾಕಿ ರಗಡಾಗಬಹುದು. ಟಪಾಲು ಬರೀರಿ ವಿಶ್ವಾಸವಿರಲಿ.

ಇ|| ಶ|| ಗಳು

ಮುಗಿಲುಹಳ್ಳಿ ಪರಮೇಶ್ವರಪ್ಪ

ಇದೇ ವಿಷಯವನ್ನು ಮೈಸೂರು ಕನ್ನಡದಲ್ಲಿ ಬೆಂಗಳೂರು ಲೈನಿಗೂ, ಇಂಗ್ಲೀಷಿನಲ್ಲಿ ದಕ್ಷಿಣದ ಕೊಂಗರಿಗೂ ಬರೆದು ಹಾಕಿದ್ದೆ. ನನ್ನ ಧಣಿ ಈ ವರ್ಷ ಶೇಂಗಾದ ಸುದ್ದಿಯೇ ಬೇಡ ಎಂದು ನನಗೆ ಹೇಳಿದ್ದ. ಆದರೆ ಊರಿನಲ್ಲಿ, ಯಾವುದಾದರೂ ವ್ಯಾಪಾರವಾದಾಗ, "ನಮಗ್ಯಾಕೆ ಗಿರಾಕಿಲ್ಲೋ? ನೀನೇನ್ ದನ ಕಾಯ್ತಿದ್ಯಾ? ಯಾವ ಶೀಮೆ ವ್ಯಾಪಾರಮಾಡ್ತಿ?" ಎಂದು ದಬಾಯಿಸುವುದು ಅವನ ಸ್ವಭಾವ. ಇದ್ದಕ್ಕಿದ್ದ ಹಾಗೇ ಮೇಲಿನಿಂದ ಗಿರಾಕಿಗಳು ಇಳಿದು ಬರುತ್ತಾರೆಯೇ? ಅವರಿಗೆ ಪತ್ರ ಬರೆಯಬೇಡವೇ? ಮಜಕೂರು ತಿಳಿಸಬೇಡವೇ? ಅಲ್ಲದೇ ಶೇಂಗಾ ವ್ಯಾಪಾರ ಬಿಟ್ಟರೆ ಇನ್ಕಂಟ್ಯಾಕ್ಸ್ ಕೊಡುವ ಸತ್ಸಂಕಲ್ಪ ಸಿದ್ಧಿಸುವುದಾದರೂ ಹೇಗೆ?

ಈಗ ಎಂಟು ಹತ್ತು ದಿವಸಗಳ ಕೆಳಗೆ ಮಿಶ್ರೀಮಲ್ ಉತ್ತರ ಬರೆದ.

ಶ್ರೀ ಮುಗಿಲುಹಳ್ಳಿ ಪರಮೇಶ್ವರಪ್ಪನವರಿಗೆ ಸದರಿಯವರ ಜೈ ಗೋಪಾಳ ವಂಚನಾ.

ತರುವಾಯ ನಿಮ್ಮ ಪತ್ರವಿಲ್ಲ ಬರೆಯಿರಿ. ಈ ಹಿಂದೆ ಬರೆದ ಪತ್ರದಲ್ಲಿ ಶೇಂಗಾ ಪೀಕ ಮಜಬೂತ ಇಲ್ಲವೆಂದು ತಿಳಿಸಿದ್ದೀರಿ. ಬೇರೇಯವರು ಶೇಂಗಾ ಪೀಕ ಅಗ್ದೀ ಮಜಬೂತ ಅದೇ ಅಂದು ಬರೆದಿದ್ದಾರೆ. ನಮಗೆ ಬಹಳೇ ಕಸವಿಶಿ ಅನ್ನಿದೆ. ನೀವು ತಿಳಿದು ಬರೆದಿರೋ ನಿದ್ದೆ ಮಾಡುತ್ತಿದ್ದಿರೋ? ನೀವು ವಿಷಯ ಸರಿಯಾಗಿ ತಿಳಿದು ಬರೆಯಿರಿ. ಸೇಂಗಾ ಸೊಟ್ಟೆ ಆವಕ ತಿಳಿಸಿದ್ದಿತೇ ಹೊರತು, ರೇಟು ಬರೆದಿರಲಿಲ್ಲ. ಪರಂತು ಈ ಸೀಜನದಲ್ಲಿ ಧಾರಣೆ ಬಗ್ಗೆ ನಿಮ್ಮ ಧೋರಣೆ ಏನದೆ ತಿಳಿಸಿರಿ.

ಪ್ರೀತಿ ಇರಲಿ.

ಇಂತೀ ಜಯಗೋಪಾಳ ವಂಚನ
ಮಿಶ್ರೀಮಲ........

ಸಹೃದಯ, ನಿನ್ನ ಪ್ರೀತಿ ನಿನ್ನ ಪ್ರೇಯಸಿಯಮೇಲೆ ಧೃಡವಾಗಿದೆ. ನನ್ನದೂ ಸಹಾ! ಆದರೆ ಈ ಮಿಶ್ರೀಮಲನಂತಹ ಜಯಗೋಪಾಳ ವಂಚಕರನೇಕರು ನನ್ನ ಪ್ರೀತಿಯ ಪಾಲನ್ನು ಬೇಡುತ್ತಿದ್ದಾರೆ. ಇರಲಿ.

ಈ ಸೀಜನದಲ್ಲಿ ಸೇಂಗಾ ಪೀಕು ಮಜಬೂತ ಇದೆಯೆಂದು ಬೇರೇಯವರು ತಿಳಿಸಿದ್ದಾರೆ ಅಲ್ಲವೇ? ಮಾರ್ಕೆಟ್ಟಿನ ಎಲ್ಲರ, ಅಭಿಪ್ರಾಯವೂ ಒಂದಾದರೆ ನನ್ನ ಅಭಿಪ್ರಾಯ ಬೇರಾಗಲು ಕಾರಣ ಇಷ್ಟೆ. ಮೊದಲನೆಯದಾಗಿ ಮಾರ್ಕೆಟ್ಟಿನಲ್ಲಿ ಅಡ್ಡಾಡಲು ನಾವು ಯಾರೂ ಹೋಗಿಲ್ಲ. ಎರಡನೆಯದಾಗಿ ಈ ವರ್ಷ ಮೊದ ಮೊದಲು ಮಳೆ ಒಂದೇಸಮನೆ ಹಿಡಿದದ್ದು ಆಮೇಲೆ ಏಕ್‌ದಂ ನಿಂತುಹೋಯಿತು. ಪೀಕು ಮಜಬೂತ ಇರಲು ಸಾಧ್ಯವಿಲ್ಲ ಎಂದು ಕಾಮನ್‌ಸೆನ್ಸ್‌ನಿಂದ ಊಹಿಸಿ ಬರೆದಿದ್ದೆ. ಸೇಂಗಾಸೊಟ್ಟೆ ರೇಟು ನಾನರಿಯೆ, ಅಂದಮೇಲೆ ಈ ಸೀಜನದಲ್ಲಿ ಅದರ ಧೋರಣ ಏನೆಂದು ತಿಳಿಯುವುದಾದರೂ ಹೇಗೆ? ನಮಗೆ ಆರ್ಡರುಗಳು ಹೇರಳ ವಾಗಿ ಬಂದರೆ "ಭಾರೀ ಡಿಮ್ಯಾಂಡ್ ಅದೇ", ತೇಜೀ ಧೋರಣ ಕಾಣುತ್ತದೆ. ಈಗಲೇ ಖರೀದಿ ಮಾಡಲು ಒಳ್ಳೇ ಸಮಯ" ಮತ್ತು ಆರ್ಡರುಗಳೇ ಬರದಿದ್ದರೆ "ಸದ್ಯಕ್ಕೆ ಬಜಾರ ಮಂದಿ ಅದೆ, ಭಾರೀ ಡಿಮ್ಯಾಂಡ್ ಆಗುವ ಲಕ್ಷಣ ಅದೆ. ಆದ್ದರಿಂದ ಈಗಲೇ ಆರ್ಡರ್ ಕೊಡ್ರೀ." ದರ ಹೆಚ್ಚಾದರೆ "ದರಗಳೆಲ್ಲ ಮಜಬೂತ ಅವೇ ಮಂದೀ ಧೋರಣ ಇಲ್ಲ, ಆರ್ಡರು ಕೊಡ್ರೀ? ನನ್ನ ಧೋರಣ ಇಷ್ಟೆ. ಈ ವರ್ಷ ದಲಾಲಿ ಅರ್ಧ ಲಕ್ಷಕ್ಕೆ ಮಿಾರಬೇಕು. ಇನ್ಕಂಟ್ಯಾಕ್ಸ್ ಇತ್ಯಾದಿಗಳನ್ನು ಮಜಬೂತವಾಗಿ ತೆರಬೇಕು.

ನಮ್ಮ ಧಣಿಗಳು ಮಿಶ್ರೀಮಲ ಹರಕ ಚಂದನ ಕಾಗದ ಓದಿದ ದಿವಸ ಭಾರೀ ರೇಗಿದರು. "ಎಲೇ ಕಪೇಲೋಟ್ಟಾ ಎಂದು ಯೊಪಾರ ಮಾಡ್ಯದಿ ಅಂತ ಹಂಗ್ಬರ್ದಿ. ಬಜಾರದಗೆ ಅಡ್ಡಾಡಹಂಗಿಲ್ಲ ಸುಡ್ಗಾಡಿಲ್ಲ ಬರದ! ರೇಟ್ಯಾಕೆ ಬರಿಲಿಲ್ಲ?" ನಾನು ಸುಮ್ಮನಿದ್ದೆ.

But, O Senor, ಆ ದಿನ ನೀನು ಅಂತಿಮ ನಿಷ್ಕರ್ಷೆ ಮುಗಿಸಿದೆಯಲ್ಲಾ, ಆ ದಿನವೇ ನನ್ನ ಭಾಗ್ಯೋದಯವಾಯ್ತು. ಬಜಾರದಲ್ಲಿ ಬೇರೇವರು ಬರೆದ ಕಾಗದ ನಂಬಿ ನಮ್ಮೂರಿಗೆ ಮಾಲು ಖರೀದಿಗೆಂದು ಬಂದರಲ್ಲಾ, ಅವರೆಲ್ಲಾ ಬಜಾರದ ಆವಕ, ಮಾಲಿನ ಕ್ವಾಲಿಟಿ ಅವನ್ನು ನೋಡಿದರು. ಬೇರೆ ವರ್ತಕರನ್ನು ದಬಾಯಿಸಿದರು. "ಅಣ್ಣಾರೇ ಪೀಕು ಹಿಂಗೇ ಏನ್ರೀ ಮಜಬೂತ ಇರೋದು. ನೀವ್ಹು ಬರ್ದದ್ದೆಲ್ಲಾ ಖೊಟ್ಟಿ ಅಂತಾ ಆತು." ಪರಮೇಶ್ವರಪ್ಪಣ್ಣಾವ್ರು ಬರೆದದ್ದೇ ಖರೇ ಆತು." ಎಂದು ಬಜಾರದಲ್ಲೆಲ್ಲಾ ಸುದ್ದಿ ಮೊಳಗಿತು. ನನ್ನ ವೈಯಕ್ತಿಕ ಸ್ವಾತಂತ್ರ್ಯದ ಪತನಕ್ಕೆ ಅದೇ ಆರಂಭ.

[**ಸ್ವಗತ ವಿಚಾರ:**—ಅಭಿಪ್ರಾಯ ಸ್ವಾತಂತ್ರ್ಯ, ವೈಯಕ್ತಿಕ ಹಕ್ಕುಬಾಧ್ಯತೆಗೆ ಜನ ಅದೇಕೆ ಅಷ್ಟು ಪ್ರಾಮುಖ್ಯತೆ ಕೊಡುವರೋ? ಜನ ದನಗಳೆರಡೂ ಒಂದೇ ಎನ್ನುವ ಕೆಂಪುರಾಷ್ಟ್ರಗಳು ಮುಂದುವರಿಯುತ್ತಲೇ ಇವೆ. ಅಷ್ಟೇ ಅಲ್ಲ, ನಮ್ಮ ಮೇಲೆ ಪ್ರಭುತ್ವ ನಡೆಸುವ ಶಕಿ ಗಳ ಸಂಖ್ಯೆ ಅನಂತ.]

ಮಿತ್ರ, ನೀನು ಪುಣ್ಯವಂತ. ಅವಳ ತುಟಿ ಕೆಂಪು, ಕೂದಲು ಕಪ್ಪು, ಕಣ್ಣಲ್ಲಿ ತಾರೆಗಳ ಕಾಂತಿ, ಹೃದಯದಲ್ಲಿ ಆಶೆಯ ಜ್ವಾಲೆ. ನೀನು ಸುಖಿಯಾದೆ. ಆದರೆ ನಾನು ......

ಪರಮೇಶಿಯ ಕೂಗು ಕೇಳಿ ಹೊರಗೆ ಹೋದೆ. ಅವನು ನಡ್ಯಲೇ ಅಂಗ್ಡಿಗೆ, ಬಿಸಿ ಹತ್ಯತೆ. ಕಾವೇರೆತೆ. ಸೇಂಗಾಬೀಜ ಒಂಬತ್ತಣೆ ಆತು. ಕೊಂಗರಿಗೆ, ಬೆಂಗಳೂರ್ನೆವರಿಗೆ, ತುಮಕೂರು, ಹಿರಿಯೂರು, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬೊಂಬಾಯಿ, ಹೈದರಾಬಾದು, ಅಕ್ಕಲಕೋಟೆ, ಹಿಂದೂಪುರ ಎಲ್ಲರಿಗೂ ಬರದ್ಹಾಕು. ಬೇಕಾದಷ್ಟೊಟ್ಹತ್ತಾಗ್ಲಿ ಇವತ್ತೇ ಮುಗಿಸು" ಎಂದ.

"ಎಲವೆಲವೋ ಧನ ಪಿಪಾಸಿ, ವ್ಯಾಪಾರ ಲೋಭ ಹತ ಚೇತಸಾ, ಪ್ರೇಮ ರಹಿತ ಹೃದಯಾ, ಕಪೆಲೊಟ್ಟಾ, ಮಂಗಾ ನಾನು ಸಿನಿಮಾಕ್ಕೆ ಹೊಂಟೆ. "ಸೇಂಗಾ ಬೀಜ ಒಂಬತ್ತಣೆನಾರ ಆಗ್ಲಿ, ಎಳ್ಡು ಬಿಲ್ಲಿನರ ಆಗ್ಲಿ ನಂಗೇನು? ಹೋಗ್ಹೋಗಲೇ" ಎಂದು ನಾನು ಒದರಿದೆ.

"ಹಂಗಲ್ಲೋ ರಾಯಾ, ಛಾನ್ಸ್ ಹತ್ತೈತೆ. ಈಗ ಸುಮ್ನೆ ಕುಂತ್ರೆ ಹೆಂಗೆ? ಸಿನಿಮಾ ನಾಳೆನೂ ಇರ್ತೈತೆ. ದುಡ್ಡೆ ಛಾನ್ಸ್ ಹಗ್ಲೆಲ್ಲ ಬರ್ತತೇನೋ?" ಎಂದ.

ಅಲ್ಲೋ, ನಾನೀಗ ಎಲ್ಲರ್ಗೆ ಕಾಗ್ದ ಬರದ್ರೆ ಆರ್ಡರ್ ಬರ್ತವೇನೋ? ನಾಳೆ ನಾನೆಲ್ಲಾ ಬರೀತಿನಿ, ನೀನ್ಹೋಗು!"

"ಲೇ ರಾಯ, ನೀನು ಯಾಪಾರಸ್ಥನ ಮಗ ಆಗಿದ್ರೆ ಹಿಂಗಂತಿದ್ದೀನೋ"

"ಲೇ ನೀನ್ಮನಶಾ ಆಗಿದ್ರೆ, ನಾನು ಸಿನಿಮಾಕ್ಹೊಂಟಾಗ ಅಡ್ಡಬರ್ತಿದ್ದೀನೋ?"

"ಅಲ್ಲೋ ನಿನಗ್ಕೇಳಿದಷ್ಟು ದುಡ್ಡು ಕೊಡ್ತಿನಿ. ನೀನ್ಮಾತ್ರ ನಮ್ಮನ್ನೇ ದಬಾಯಿಸ್ತಾಂತ, ಎದ್ರು ಮ್ಯಾತಾಡ್ತೀಂತ, ಥೂ! ಜನಕ್ಕೆ ಕ್ರಿಯಾ ಇಲ್ಲ!"

"ಅಲ್ಲೋ, ಮುನ್ನೂರರವತ್ತು ದಿನ, ಇಪ್ಪತ್ನಾಕು ಗಂಟೆನೂ ದುಡುದ್ರೂ ನಿಂಗೆ ಸಾಲ್ದು! ಹೋಗ್ಲಿ, ಯಾಕೀಗಾ ಆ ಮಾತು!"

"ಅಲ್ಲಪಾ ರಾಯಾ, ನೀನ್ಹಿಂಗೆ ಕುಂತ್ರೆ ಇನ್ಕಂಟ್ಯಾಕ್ಸು ಹತ್ಸಾವ್ರ, ಕೊಡ ಬೇಕಾಗ್ತೈತೆ ನ್ಹಿಂಗಪ್ಪ! ಬಾರಯ್ಯಾ ಕಾಫಿ ಕುಡಿಸ್ತಿನಿ. ಇವತ್ತೊಂದಿನ ಮೊಲ ಎದ್ವಾಗ ನಾಯಿ ಮಾಡಿದ್ಹಂಗೆ ಮಾಡಬ್ಯಾಡ" ಎಂದ ನನ್ನ ಧಣಿ. ನನ್ನ ಕರುಳು ಕರಗಿತು. ಸಿಂಗದಾಣ, ಶೇಂಗಾ ಸೊಪ್ಪಿಗಳ ಧೂಳು ನನ್ನ ಮನಃಪಟಲದಲ್ಲಿ ಮಬ್ಬು ಕವಿಸಿದವು. ಸಿನಿಮಾ ಯಾಕೆ ನೋಡಬೇಕು ಎನ್ನಿಸಿತು. ಒಳಕ್ಕೆ ಹೋದೆ.

"ಸ್ವಲ್ಪ ಅರ್ಜಂಟ್ ಕೆಲ್ಸ ಇದೆ. ಬರ್ತೀನಿ. ಸಿಟ್ಟಾಗಬೇಡ. ಬೇಗ ಬಂದು ಬಿಟ್ಟೆ. ನಾಳೆ ಫಸ್ಟ್ ಷೋಗೆ ಗ್ಯಾರಂಟಿ!" ಎಂದೆ. ಹೊರಟೆ.

* * * *

ಓ ಪ್ರೇಮಿ, ಪ್ರೇಮದ ಪ್ರಭಾವ ಅನಿರ್ವಚನೀಯವಾದುದು. ನಿನಗೆ ಪ್ರೇಯಸಿಯೊಡನೆ ಕಾಲಕಳೆದುದು ಹೇಗೆ ಎಂದೇ ತಿಳಿಯುವುದಿಲ್ಲ. ಹಾಗೇ ನನಗೂ!

ಈಗ ರಾತ್ರಿ ಹನ್ನೆರಡು ಗಂಟೆ. ಹತ್ತು ಗಂಟೆಗೆ ಪರಮೇಶಿ ಅಂಗಡಿ ಬಿಟ್ಟು ಹೋದವನು ಇನ್ನೂ ಬಂದಿಲ್ಲ. ನನ್ನ ಕೈ ನೋಯುತ್ತಿದೆ. ಕಣ್ಣುರಿಯುತ್ತಿವೆ. ಹೊಟ್ಟೆ ತಾಳ ಹಾಕುತ್ತಿದೆ. ದೇಶಕಾಲಗಳ ಜ್ಞಾನ ಸಂಪೂರ್ಣ ಮರೆತಿದೆ. ಏಳು ಗಂಟೆಗೆ ಕುಳಿತವನು ನಾನು. ಬೆಂಗಳೂರು, ಸೇಲಂ, ಕೊಯಮತ್ತೂರು, ಹಿಂದೂಪುರ, ಚಿಂತಾಮಣಿ, ಶ್ರೀವಿಲ್ಲಿಪುತ್ತೂರು, ಕಾಂಗಾಯಂ, ಮದರಾಸು ಎಲ್ಲ ಊರಿಗೂ ಕಾಗದ ಬರೆದಿದ್ದೇನೆ. ಆಯಿಲ್ ಮಿಲ್ಸ್, ಸಹಕಾರ ಸಂಘಗಳು

ಬ್ರೋಕರುಗಳು, ದಲ್ಲಾಳಿಗಳು, ಮಂಡಿ ವ್ಯಾಪಾರಿಗಳು ಎಲ್ಲರಿಗೂ ಹೊಸ ಸೇಂಗಾ ಬಂದದ್ದು, ಅದರ ದರ, ಹೊಸ ಸೇಂಗಾ ಬೀಜ ತಯಾರಾಗಿದ್ದು ಅದರ ದರ, ಈ ವರ್ಷ ಬೆಳೆ ಕಡಿಮೆಯಾದ್ದು, ಮುಂದೆ ದರ ಹೆಚ್ಚಾಗುವ ಸಂಭವವಿರುವುದರಿಂದ ಈಗಲೇ ಖರೀದಿ ಮಾಡುವ ಅವಶ್ಯಕತೆಗಳನ್ನು ತಿಳಿಸಿ, ಈ ತಮ್ಮ ವಿಶ್ವಾಸಿಯ ಸಹಕಾರ ಕೇವಲ ಶೇಕಡ ಎರಡರಷ್ಟು ದಲ್ಲಾಳಿಗೆ ಎಂದೆಂದೂ ಲಭಿಸುವ ಮಹತ್ವದ ರಹಸ್ಯವನ್ನು ವಿವರಿಸಿದ್ದೇನೆ. ಇನ್ನೂ ಬಾಗಲಕೋಟೆ, ಗದಗ, ಹುಬ್ಬಳ್ಳಿ, ಹೈದರಾಬಾದು, ಬೊಂಬಾಯಿಗಳಿಗೆ ಬರೆಯಬೇಕಾಗಿದೆ.

ಹೊರಕ್ಕೆ ಹೋಗಿ ಬಂದೆ. ಜನ ದನಗಳೆಲ್ಲಾ ವಿಶ್ರಮಿಸಿವೆ. ಕಳ್ಳರೂ ದೆವ್ವಗಳೂ ಹೆದರುವಂಥ ಹೊತ್ತು! ಇದ್ದ ಊರಿನಲ್ಲೇ ಹತಾಶಳಾಗಿ ವಿರಹ ಪೀಡಿತೆಯಾಗಿರುವ ನನ್ನ ಪ್ರೇಯಸಿಯನ್ನು, ಪ್ರಾಣಕಾಂತೆಯನ್ನು ನೋಡುವ ಸೌಭಾಗ್ಯ ನನಗಿಲ್ಲ. ಒಂದು ಕಾಗದ ಬರೆದೆ.

ಮುಗಿಲುಹಳ್ಳಿ
ಮಂಡಿಪೇಟೆ
ರಾ. 12 ಗಂ.

ನನ್ನ ಪ್ರಾಣೇಶ್ವರಿ, ಬಾಳಗೆಳತಿಗೆ,

ಈ ಸಂಜೆ ಆರು ಗಂಟೆಗೇ ಬೇಗ ಬರುವುದಾಗಿ ಹೇಳಿ ಹೋಗಿದ್ದವನು ಇನ್ನೂ ಬಂದಿಲ್ಲದೆಂದು ಚಿಂತಿಸಬೇಡ.

ನಿನಗಿದು ಆಶ್ಚರ್ಯಕರವಾಗಿ ತೋರಬಹುದಾದರೂ ಈಗ ಶೇಂಗಾ ಸೊಟ್ಟೆ ಸೀಜನ ಚಾಲೂ ಅದೆ. ದಿನಾಲು ಬಜಾರದಲ್ಲಿ ಆವಕ ಹದಿಮೂರರಿಂದ, ಐದು ಸಾವಿರ ಚೀಲಾ ಅದೆ. ದರ ಲೋಕಲ ಲೂಸ್ ಕ್ವಿಂಟಲ ಒಂದಕ್ಕೆ ಇಪ್ಪತ್ತೈದರಿಂದಾ ಅರವತ್ತೈದರ ವರೆಗೆ ನಡೆದದೆ. ಈ ವರ್ಷ ಮಳೆ ಹೆಚ್ಚಾಗಿ ಪೀಕು ಮಜಬೂತ ಇಲ್ಲಾ. ಹೀಗಿರುವಾಗ ನಾನು ನಿನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗಲು ಸಾಧ್ಯವೇ? ಮನೆಗೆ ಬರಲು ಇದು ಕಾಲವೇ?

ಅಷ್ಟೇ ಅಲ್ಲ, ಸಿಂಗದಾಣ ತಯ್ಯಾರ ಅದೆ. ದರ ಐವತ್ತು ಕಿಲೋಗ್ರಾಂಗೆ ನಲವತ್ತು ಮೂರು ರೂಪಾಯಿ ಒಂಬತ್ತಾಣೆ ಅದೆ. ಈಗಾಗಲೇ ಗಿರಾಕಿ ರಗಡೆ ಅವೆ. ಮುಂದೆ ಭಾರೀ ಡಿಮ್ಯಾಂಡ ಆಗುತ್ತದೆ. ಸ್ಟಾಕ್ ಮಾಡಲು ಇದೇ ಕಾಲ. ಇನ್ನೊಂದು ವಾರದೊಳಗಾಗಿ ಎಕ್ಸ್‌ಪೆಲರ್ ಕ್ವಾಲಿಟಿ ಮಾಲು ಬಜಾರಕ್ಕೆ ಬರುತ್ತದೆ. ಕೂಡ್ಲೇ ತಾರು ಮೂಲ್ಕ ಆರ್ಡರು ಕೊಡ್ರೀ. ಮುಖ್ತಾ ಖರೀದಿಗೆ ಬರುವುದು ಒಳ್ಳೇದು. ನಿಮ್ಮ ಕೆಲ್ಸ ಬಹಳ ಕಾಳಜಿಯಿಂದ ಮಾಡಿಕೊಡುತ್ತೇವೆ.

ಹೃದಯೇಶ್ವರೀ, ನಾಳೆ ಮಧ್ಯಾಹ್ನ ಒಂದು ಗಂಟೆಗೆ ನಾನು ಮನೆಗೆ ಬರುತ್ತೇನೆ. ಮಖ್ತಾ ಬಂದಾಗ ಹೆಚ್ಚಿಗೆ ವಿಷ್ಯಾ.

ಪ್ರೀತಿ ಏಕರೀತಿ ಇರಲಿ. ಎಂದು,

ನಾನು.

ಲೋಕಲ್ ಡೆಲಿವರಿ ಎಕ್ಸ್‌ಪ್ರೆಸ್ ಡೆಲಿವರಿ ಸ್ಟಾಂಪ್ ಹಚ್ಚಿ ಪೋಸ್ಟಿಗೆ ಹಾಕಿ, ಅಂಗಡಿಗೆ ಬಂದೆ. ಮಿಶ್ರಿಮಲ ಹರಕಚಂದನಿಗೆ ಕಾಗದ ಬರೆಯಲಾರಂಭಿಸಿದೆ.

ಸಹೃದಯಾ, ಈ ಶೇಂಗಾ ಸೊಟ್ಟೆ, ಸಿಂಗದಾಣಗಳ ವಕ್ರದೃಷ್ಟಿ ನಿನಗೆ ಕಾಟ ಕೊಡದಿರಲಿ ತಥಾಸ್ತು.

—ಅ. ರಾ. ಸೇ.

— o —

ಹದಿನಾರರ ಪ್ರಾಯ. ಬೆಳದಬಿಗಿಯಾದ ಆಯಕಟ್ಟು. ಆದರೆ ಗಂಟಲಲ್ಲಿ ಮಾತ್ರ ಕರಕಲು ಧ್ವನಿ. ನೋಡುಕ್ಕೆ ಹೆಣ್ಣು ಚೆನ್ನು. ಬಾಯ್ಬಿಡೋತನಕ. ಗಂಟಲು ನೋವಿಗೆ ಅಂತ ಡಾಕ್ಟರ ಹತ್ತಿರ ಬಂದಿದ್ದಳು. ಆಪರೇಷನ್ ಅಗ್ಬೇಕಮ್ಮಾ ಅಂತ ವೈದ್ಯರು ಸಲಹೆ ಮಾಡಿದರು.

ಆಪರೇಷನ್ ಮಾಡಿಸಿಕೊಂಡರೆ ಧ್ವನಿ ಕೆಟ್ಟು ಹೋಗುತ್ತ್ಯೇ ಡಾಕ್ಟರೇ ಎಂದು ಬೆಡಗಿನ ಬಿನ್ನಾಣಿ ಕೇಳಿದಳು.

"ಧ್ವನಿ ಕೆಡುಲ್ಲಮ್ಮಾ! ಅದು ಸಾಧ್ಯವೇ ಇಲ್ಲ. ನೀವು ಬಾರಿಸೋ ಹಾರ್ಮೋನಿಯಂಗೆ ದಿವನಾಗಿ ಹೊಂದುಕೊಳ್ಳುತ್ತೇಮ್ಮ!" ಎಂದರು ಡಾಕ್ಟರು.


* * * *

ಕಾಮನ್‌ವೆಲ್ತು ಕೈಬಿಟ್ಟು ಹೋದರೂ, ಕೂಡ, ಬ್ರಿಟನ್ನು ಯೂರೋಪಿಯನ್ ಕಾಮನ್ ಮಾರ್ಕೆಟ್ಟನ್ನು ಸೇರುವುದಂತೆ.

—ಸವರ್ಣೀಯತ್ವ ಜಯಗಳಿಸಿತು !!

ಊರ್ವಶಿ—ಪಾರ್ವತಿ

ಊರ್ವಶಿಯು ತನ್ನ ತೊಡೆಯೆ ಚೆಂದವೆಂದಳು
ಪಾರ್ವತಿಯು ಶಿವನ ತೊಡೆಯೇ ಅಂದವೆಂದಳು
ಊರ್ವಶಿಯು ಮೆರೆಯುತಿಹಳು
ಪಾರ್ವತಿಯೂ ಬೆಳೆಯುತಿಹಳು
ಈರ್ವರೂನೂ ಬಾಳು ನಮದು ಚೆಂದವೆಂಬರು



ಮೈಸೂರಿಗೆ ದಸರಾ ಬಂತು ಅಂದ್ರೆ ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ
ಇದೇ ಚಿತ್ರ ಮರುಕಳಿಸುತ್ತೆ!

ಕಪ್ಪೆಗಳ ರಫ್ತು

ನಾಣಿ ನನ್ನ ಬಾಲ್ಯ ಸ್ನೇಹಿತ. ಮೆಟ್ರಿಕ್—ಒಟ್ಟಿಗೆ ಮೂರನೇ ಬಾರಿ ಕಟ್ಟಿದಾಗ ಪಾಸುಮಾಡಿ, ಇಂಟರ್‌ನಲ್ಲಿ ಬೇರೆ ಬೇರೆ ದಾರಿ ಹಿಡಿದೆವು. ಮುಂದೆ ಲಾಯರಿಯಾಗಿ, ಅದರಿಂದ ಜೀವನ ಸಾಗದಿದ್ದರೆ ಮಂತ್ರಿಯಾದರೂ ಆಗಬಹು ದೆಂದು ನಾನು B.A. ಸೇರಿದೆ. ನಾಣಿ—ಪ್ರಾಣಿಶಾಸ್ತ್ರ ಓದಲು B.Sc , ಸೇರಿದ. ಒಂದು ದಿನ ಮೊದಲನೆಯ ವರ್ಷ B Sc., ಓದುತ್ತಿದ್ದಾಗ ನಾಣಿ ಇದ್ದಕ್ಕಿದ್ದ ಹಾಗೆ ನಮ್ಮ ಮನೆಗೆ ಬಂದ.

"ಪಾಂಡು—ಈ ಡಿಗ್ರಿ ಗಿಗ್ರಿ ನನಗೆ ಬೇಕಾಗಿಲ್ಲ" ಅಂದ.

"ಮತ್ತೇನು ಬೇಕು ನಾಣಿ ?" ಅಂತ ಕೇಳಿದೆ.

"ನಾಳೇನೇ ನಾನು ಟ್ರಂಕು ಹಾಸಿಗೆ ಕಟ್ಟಿ ನಮ್ಮ ಕಲ್ಲೂರಿಗೆ ಹೊರಟೆ ಪಾಂಡು. ಕಲ್ಲೂರಿನಲ್ಲಿ ನನ್ನ ಜೀವಮಾನವನ್ನೆಲ್ಲಾ ಪ್ರಾಣಿಶಾಸ್ತ್ರದ ಪ್ರಯೋಗ ಗಳಲ್ಲಿ ಉಪಯೋಗಿಸುತ್ತೇನೆ" ಅಂದ.

ಕಲ್ಲೂರಿನಲ್ಲಿ ಪ್ರಾಣಿಶಾಸ್ತ್ರದ ಪ್ರಯೋಗಗಳಿಗೆ ಅಷ್ಟು ಫಲವತ್ತಾದ ಅವಕಾಶ ಎದೆ ಅಂತ ನನಗೆ ಕಲ್ಪನೆ ಇರಲಿಲ್ಲ.

"ಪಾಂಡು—ನಿನಗೆ ನೆಲದ ಮೇಲೆ ವಾಸಿಸುವ ಕಪ್ಪೆಗೂ, ನೀರಿನಲ್ಲಿ ವಾಸಿಸುವ ಕಪ್ಪೆಗೂ ವ್ಯತ್ಯಾಸ ಗೊತ್ತೇ" ಅಂತ ಕೇಳಿದ

"ವ್ಯತ್ಯಾಸವೇನಾದರೂ ಉಂಟೆ ?"ಅಂದೆ.

ರಷ್ಯನ್ ಗಗನವೀರ ಟಿಟೋವ್, ಕೆನೆಡಿಯವರ ಕಾರಿನ ಡ್ರೈವರ್ ಕಡೆ ಬೀರಬಹುದಾದ ತಾತ್ಸಾರ ದೃಷ್ಟಿಯನ್ನ ನಾಣಿ ನನ್ನ ಕಡೆ ಬೀರಿದ.

"ಇದೆ. ಬೇಕಾದಷ್ಟಿದೆ" ಅಂದ.

"ಓಹೋ !" ಅಂದೆ.

ಪಾಂಡು—ನಾನು ಕಲ್ಲೂರಿನಲ್ಲಿ ಶಾಶ್ವತವಾಗಿ ನೆಲೆಸಿ, ನನ್ನ ಭವಿಷ್ಯವನ್ನೆಲ್ಲಾ ಕಪ್ಪೆಗಳ ಜೀವನದ ಬಗ್ಗೆ ಶೋಧನೆಯಲ್ಲಿ ಕಳೆಯುತ್ತೇನೆ."

"ಆದರೆ ನಾಣಿ—ಕೇವಲ ಒಂದು ಕಪ್ಪೆಯ ಜೀವನದಲ್ಲಿ ಅದೆಂತಹ ತತ್ವ ಅಡಗಿದೆ ?"

"ಇಡೀ ಬ್ರಹ್ಮಾಂಡವೇ ಅಡಗಿದೆ" ಅಂದ.

ಇದು ನಡೆದು ಆರು ವರ್ಷಗಳು ಕಳೆದುವು.

ನಾಣಿ ಕಲ್ಲೂರು ಸೇರಿ ತನ್ನ ಗದ್ದೆ, ಹೊಲ, ತೋಟಗಳ ಮಧ್ಯೆ ತನ್ನ ಕಪ್ಪೆಗಳನ್ನು ಸಾಕುತ್ತಾ ಮೈಸೂರಿನ ಸಂಪರ್ಕವನ್ನೇ ಬಿಟ್ಟ. ಎಂದಾದರೂ ಒಂದು ದಿನ ಅಪರೂಪವಾಗಿ ತನ್ನ ಕಪ್ಪೆಗಳ ಉದ್ಧಾರಕ್ಕಾಗಿ ಸಾಹಿತ್ಯ ಶೇಖರಣೆಗೆ ಮೈಸೂರಿಗೆ ಬಂದಾಗ ನನ್ನ ಕಣ್ಣಿಗೆ ಬಿದ್ದರೆ, ಅವನನ್ನು ವೈಗಳ್ಳರ ಸಂಘಕ್ಕೊಯ್ದು ಉಪಚರಿಸಿ ಬೀಳ್ಕೊಡುತ್ತಿದ್ದೆ. ಎರಡು ವರ್ಷಕ್ಕೆ ಹಿಂದೆ ನನ್ನ ಮತ್ತು ಶ್ರೀಕಂಠನ ಸಲಹೆ ಮೇರೆ ವೈಗಳ್ಳರ ಸಂಘದಲ್ಲಿ ಕಪ್ಪೆಗಳ ಜೀವನದ ಬಗ್ಗೆ ಭಾಷಣಮಾಡಿದ. ತನ್ನೊಡನೆ ನಲವತ್ತೆರಡು ಬಗೆಯ ಕಪ್ಪೆಗಳನ್ನು ತಂದಿದ್ದ. ಅವುಗಳಲ್ಲಿ ಕೇವಲ ಆರು ಕಪ್ಪೆಗಳು ಮಾತ್ರ ಪುನಃ ಅವನಿಗೆ ಸಿಕ್ಕಿದ್ದುವು. ಪುನಃ ಅವನ ಭೇಟಿ ನನಗಾಗಿರಲಿಲ್ಲ.

ಆದ್ದರಿಂದ—ಇದ್ದಕ್ಕಿದ್ದ ಹಾಗೆ ಒಂದು ದಿನ ನನ್ನನ್ನು ಹುಡುಕಿಕೊಂಡು ನಾಣಿ ಮೈಸೂರಿಗೆ ಬಂದಿದ್ದ, ಅಂತ ಶೌರಿ ನನಗೆ ತಿಳಿಸಿದಾಗ ಆಶ್ಚರ್ಯವಾಯ್ತು.

"ಸರಿಯಾಗಿ ಹೆಸರು ಕೇಳಿದೆಯಾ ಶೌರಿ!" ಅಂತ ಒತ್ತಿ ಕೇಳಿದೆ.

"ಸರಿಯಾಗಿ ಕೇಳಿದೆ ಸರ್. ಕಲ್ಲೂರು ನಾರಾಯಣರಾಯರು ಅಂತ ಕೇಳಿದರು. ನಾಣಿ—ಅಂತ ನೀವು ಕರೀತೀರಿ ಅಂತ ಕೂಡ ಹೇಳಿದರು" ಅಂದ.

"ನೋಡುಕ್ಕೆ ಹೇಗಿದ್ದರು—ಶೌರಿ!"

"ತಮ್ಮ ಸ್ನೇಹಿತರ ಬಗ್ಗೆ ನಾನು ಟೀಕೆ ಮಾಡಲಾರೆ ಸರ್. ಆದರೆ—ಇವರು ಬಾಯಿಬಿಟ್ಟಾಗಲೆಲ್ಲಾ ನನಗೆ ಏಕೋ—ಕಪ್ಪೆಯ ಜ್ಞಾಪಕ ಬರುವಂತೆ ತೋರಿತು."

"ಸರಿ ಬಿಡು ಶೌರಿ, ನಮ್ಮ ನಾಣೀನೇ"—ಅಂತ ತೀರ್ಮಾನಿಸಿ ಒಪ್ಪಿದ್ದೆ.

ಮರು ದಿನ ಮಧ್ಯಾಹ್ನ, ಮ್ಯಾಟಿನೀ ಷೋ ಮುಂಚೆ ಕೊನೆಯ ಪ್ಲೇಟಿನ ಸಮಯ—ನಾಣಿ ಬಂದ.

"ಓಹೋ—ಇಧೀಯಾ ಪಾಂಡು?"

"ಬಾ—ನಾಣಿ - ಬಾ" ಅಂದೆ.

ಸೋಫಾ ಮೇಲೆ ಕುಳಿತ. ಶೌರಿ ತಂದ ಟೀ ಇಬ್ಬರೂ ಕುಡಿದೆವು.

"ಪಾಂಡು--ಈ ಪಟ್ಟಣದೋರನ್ನ ನಂಬಲೇಬಾರದು" ಅಂದ ನಾಣಿ.

"ಏಕಪ್ಪ?"

"ನೋಡು"—ಅನ್ನುತ್ತಾ—ತನ್ನ ಕೈಲಿದ್ದ ಒಂದು ಚೀಲದಿಂದ ಒಂದು ಪುಸ್ತಕ ಹೊರಕ್ಕೆ ತೆಗೆದು—"ನೋಡು ಪಾಂಡು—ಈ ಪುಸ್ತಕದ ಹೆಸರು 'ಹಾರುಗಪ್ಪೆ! ಇದನ್ನು ನಾನು—ಕಪ್ಪೆಗಳ ಬಗ್ಗೆ ಬರೆದಿರುವ ಗ್ರಂಥ ಅಂತ ಕೊಂಡೆ. ಆದರೆ ಇದು—ಕೇವಲ ಒಂದು ಪತ್ತೇದಾರಿ ಕಾದಂಬರಿ. ಇದು—ಮೋಸ ಹೌದೋ ಅಲ್ವೋ?"

"ಹಾಗಾದರೆ—ನಾಣಿ ನೀನಿನ್ನೂ ನಿನ್ನ ಕಪ್ಪೆ ಹುಚ್ಚು ಬಿಟ್ಟಿಲ್ಲ?"

ನಾಣಿ ಬೆಚ್ಚಿದ.

"ಹುಚ್ಚು?—ಏನು ಹಾಗೆಂದರೆ? ಈಗ ನಾನೊಂದು ಮಹತ್ತರವಾದ ಸಂಶೋಧನೆಯ ಮಧ್ಯದಲ್ಲಿದ್ದೀನಿ. ಕಪ್ಪೆಗಳ ಪ್ರೇಮ ಜೀವನದ ಬಗ್ಗೆ ನಿನಗೆ ಕಿಂಚಿತಾದರೂ ಗೊತ್ತೇ? ಹೆಗ್ಗಡದೇವನಕೋಟೆಯ ನೀರಿನ ಕಪ್ಪೆಗಳು ಕೆಂಪು ಬೆಳಕಿನಲ್ಲಿ ಬಹಳ ಚುರುಕಾಗಿ ಪ್ರೀತಿಸುತ್ತವೆ ಅಂತ ಗೊತ್ತೆ? ಅದೇ ಎಡತೊರೆಯ ನೆಲದ ಕಪ್ಪೆಗಳು, ಹುಣಸೂರು ಕಡೆ ಮರದ ಕಪ್ಪೆಗಳಿಗಿಂತಲೂ—ಹಸುರು ಬೆಳಕಿನಲ್ಲಿ ಚುರುಕಾಗಿರುತ್ತವೆ. ಆದರೆ, ಹುಣಸೂರು ದಾಟಿ—ಪೆರಿಯಾ ಪಟ್ಟಣದಲ್ಲಿರೋ ನೀರು ಕಪ್ಪೆಗಳು ಎಡತೊರೆ—ಛೆ! ಹಾಗಲ್ಲ—ಹುಣಸೂರು ದಾಟಿ ಪೆರಿಯಾ ಪಟ್ಟಣದಲ್ಲಿರೋ ಮರದ ಕಪ್ಪೆಗಳು ಎಡತೊರೆ...."

ಭಾಷಣ ಮುಗಿಯುವ ಸೂಚನೆ ಕಾಣಲಿಲ್ಲ.

"ಅದಿರಲಿ ನಾಣಿ. ನೀನು ಮೈಸೂರಿಗೆ ಇಷ್ಟು ಹಠಾತ್ತನೆ ಬರೋಕೆ ಕಾರಣ ವೇನು?" ಅಂದೆ.

"ಶ್ರೀಧರರಾಯರನ್ನು ನೋಡಬೇಕಾಗಿ ಬಂದೆ—ಪಾಂಡು"

"ಯಾವ ಶ್ರೀಧರರಾಯರು?"

"ರಿಟೈರ್ಡ್ ಜಡ್ಜ್."

"ನಾಣಿ—ಹೀಗೆ ನೀನು ನಿನ್ನ ಕಪ್ಪೆಗಳನ್ನೂ ಅಗಲಿ ಶ್ರೀಧರರಾಯರನ್ನು ನೋಡಲು ಬಂದಿರಬೇಕಾದರೆ—ಏನೋ ದೊಡ್ಡ ವಿಷಯವಿರಬೇಕು. ಹೇಳ ಬಾರದೇ?"

ಹಲ್ಲು ಕಿರಿದ.

"ನಳ್ಳಿ...."

"ನಳ್ಳಿ ?"

"ನಳಿನಿ — ಶ್ರೀಧರರಾಯರ ಮಗಳು — ನಿಶ್ಚಯ ಆಗಿದೆ." ಪುನಃ ನಾಚಿ ಹಲ್ಕಿರಿದ.

"ನಾಣಿ—ನೀನು ತೀರಾ ಗುಟ್ಟಿನ ಮನುಷ್ಯ. ನನಗೆ ಏನೊಂದೂ ತಿಳಿಸಿಯೇ ಇಲ್ಲ. ನಡಿ—ವೈಗಳ್ಳರ ಸಂಘದಲ್ಲಿ ಇದಕ್ಕಾಗಿ ಕುರಿತು ಸಭೆ ಸೇರಲೇ ಬೇಕು."

"ಇಲ್ಲ ಪಾಂಡು—ನನಗೇ ತಿಳಿಯಲಿಕ್ಕೆ ಮೊದಲೇ ಎಲ್ಲಾ—ಅಮ್ಮ ನಿರ್ಧರಿಸಿ ಬಿಟ್ಟರು. ಆದರೆ—ಈಗೊಂದು ದೊಡ್ಡ ಪೀಕಲಾಟವಾಗಿದೆ."

"ಹುಡುಗಿ—ನಳ್ಳಿ—ನಿನ್ನೊಪ್ಪಿರಲಾರಳು ಅಲ್ವೇ ?"

"ಅದೇನಿಲ್ಲ. ಆದರೆ ನನ್ನ ಕಪ್ಪೆಗಳನ್ನೊಪ್ಪಿಲ್ಲ. ಶ್ರೀಧರರಾಯರು ಪತ್ನೀ ಪುತ್ರಿಯ ಸಮೇತ ನಮ್ಮ ಮನೆಗೆ ಬಂದ ದಿನ ಒಂದು ಎಡತೊರೆ ಮರದ ಕಪ್ಪೆ ಶ್ರೀಧರರಾಯರ ಬೆನ್ನ ಮೇಲೆ ಹಾರಿ ಕುಳಿತಿತ್ತಂತೆ. ಆಗ—ನಾನಿರಲಿಲ್ಲ. ಅಮ್ಮ —ಅಮ್ಮ ನೋಟೀಸ್ ಕೊಟ್ಟಿದ್ದಾರೆ."

"ಈಗ ಅದಕ್ಕೆ ಏನುಮಾಡಬೇಕು—ಅಂತ ಇದ್ದಿ ?"

"ನಾನೇ ಶ್ರೀಧರರಾಯರ ಹತ್ತಿರ ಹೋಗಿ, ನನ್ನ ಮಹಾ ಶೋಧನೆಗಳ ಬಗ್ಗೆ ತಿಳಿಸಬೇಕು. ಆದರೆ—ಅವರೆದುರಿಗೆ ನಿಲ್ಲಲು ಕೂಡ ಧೈರ್ಯ ಬರುಲ್ಲ. ಮುಳ್ಳುಕಪ್ಪೆ ಎದುರು ಹುಣಸೂರು ನೀರುಕಪ್ಪೆಗೆ ಆಗುವ ಹಾಗೆ—ಕೈಕಾಲುಗಳು ನಡುಗುತ್ತವೆ."

ನಾನು ಸುಮ್ಮನಿದ್ದೆ.

"ಪಾಂಡು—ಶ್ರೀಧರರಾಯರು ಕಪ್ಪೆಯಾದರೂ ಆಗಿದ್ದರೆ—ಎಷ್ಟು ಚೆನ್ನಾಗಿತ್ತು ?" ಅಂದ.

ಇದು ನನ್ನ ಕಲ್ಪನೆ ಮೀರಿತ್ತು.

"ಆದರೆ ನಾಣಿ—ನೀನು ಆ ಕಪ್ಪೆ ಹತ್ತಿರ ಹೇಗೆ ಮಾತನಾಡುತ್ತಿದ್ದೆ ?"

"ಧಾರಾಳವಾಗಿ—ನಾನೂ ಆಗ ಕಪ್ಪೆಯೇ ಆಗಿರುತ್ತಿದ್ದೆ—ಅಲ್ವೇ ?"

"ಆದರೆ—ನಳಿನಿ—ನಿನ್ನ ಹೇಗೆ ಒರಿಸುತ್ತಿದ್ದಳು ??

"ಧಾರಾಳವಾಗಿ. ನಳಿನಿ—ಹೆಣ್ಣು ಕಪ್ಪೆಯಾಗಿ ಹುಟ್ಟಿರುತ್ತಿದ್ದಳು !"

ನಾನು ತೆಪ್ಪಗಾದೆ. ವಿಷಯ "ಇಯನ್‌ಸ್ಟೀನರ ನಾಲ್ಕನೇ—ಪ್ರಮಾಣ" ವನ್ನು ಮುಟ್ಟುವಂತೆ ತೋರಿತು. ಶೌರಿಯೊಬ್ಬನೇ ಈ ಸಮಸ್ಯೆಯನ್ನು ಬಿಡಿಸ ಬಹುದೆಂದು ನನಗನ್ನಿಸಿತು.

"ನನ್ನ ಕೈಲಾದಮಟ್ಟಿಗೆ—ಪರಿಹಾರ ಒದಗಿಸಲು ಪ್ರಯತ್ನಿಸುತ್ತೇನೆ—ಸರ್ ಅಂದ.

ಇದು ನಡೆದ ಮೇಲೆ ಐದು ದಿನಗಳವರಿವಿಗೆ ನನಗೂ ನಾಣಿಗೂ ಭೇಟಿಯೇ ಆಗಲಿಲ್ಲ. ಮನ್ನಾಡೇ—ಅರಾಧಕರ ಸಂಘದ ಚುನಾವಣೆಗಳು, ಪ್ರವಾಹ ನಿಧಿಗಾಗಿ ದುಡಿದ ನಟ ನಟಿಯರಿಗೆ—ನ್ಯೈಗಳ್ಳರ ಸಂಘದಿಂದ ಧನ ಸಹಾಯದ ಏರ್ಪಾಟು—ಈ ರಗಳೆಗಳಲ್ಲಿ ನನಗೆ ಪುರುಸೊತ್ತೇ ಆಗಲಿಲ್ಲ. ಐದನೆಯ ದಿನ ರಾತ್ರಿ ನಾನು ಮನೆ ಸೇರುವ ಹೊತ್ತಿಗೆ—ರೇಡಿಯೋದಲ್ಲಿ ಹರಿಕಥೆ ಆಗ್ತಾ ಇತ್ತು. ಸೋಫಾ ಮೇಲೆ ನಾಣಿ ಹರಿಕಥೆ ಕೇಳ್ತಾ ಕುಳಿತಿದ್ದ.

"ಅಹಹಾ! ಬಂದೇ ಬಿಟ್ಟ—ನ್ಯೈಗಳ್ಳ!" ಅನ್ನುತ್ತಾ ನಾಣಿ ಎದ್ದುಬಂದು ನನ್ನ ಬೆನ್ನಿನ ಮೇಲೆ ಬಲವಾಗಿ ಗುದ್ದಿದ.

ನನ್ನ ಕೋಣೆ ಹೊಕ್ಕೆ. ಅಲ್ಲಿಗೂ ಬಂದ.

"ಐದು ದಿನಗಳಿಂದ— ಎಲ್ಲಿಗ್ಹೈಯ್ಯಾ ಹೋಗಿದ್ದೆ ? ಈ ದೇಶದಲ್ಲಿ—ನಿನ್ನಂತಹ—ಪಾಪದ ದುಡ್ಡಿಗೆ—ಅನ್ಯಾಯದ ಆಸ್ತಿಗೆ—ವಾರಸುದಾರರಿಂದಲೇ—ನಮ್ಮ ದೇಶದಲ್ಲಿ ಇಷ್ಟು ಕಷ್ಟವಿರೋದು. ನೀನೋ, ನಿನ್ನ ಸಂಘಗಳೋ, ನಿನ್ನ ಮೀಟಿಂಗೋ, ಈ ರೀತಿ ಅನರ್ಥವಾಗಿ ಹಾಳುಮಾಡೋ ಹಣ, ಸಮಯ, ಕಾಲ, ದುಡ್ಡು—ಇವುಗಳಲ್ಲಿ ನೂರನೇ ಒಂದು ಭಾಗ—ಉಪಯೋಗಿಸಿದರೆ—ನಿನಗೂ, ನಿನ್ನನ್ನು ಸಾಕಿ, ಸಲಹಿ, ಮುಂದಕ್ಕೆ ತಂದವರಿಗೂ, ಎಷ್ಟೋ ನೆಮ್ಮದಿ."

ತಲೆ ಚಿಟ್ಟೆಂದರೂ—ಏನೊಂದೂ ನಾನು ಹೇಳಲಿಲ್ಲ.

ನಿನ್ನಂತಹ ಜನರಿಂದ—ನಮ್ಮ ದೇಶ, ಈ ದೇಶ, ನಮ್ಮ ಭಾರತ ದೇಶ, ಕನ್ನಡ ನಾಡು—ಎಂದಿಗೂ, ಎಂದೆಂದಿಗೊ, ಏಳಿಗೆಯಾಗುಲ್ಲ. ನಿನಗೆ, ನಿನ್ನ ಸಮಾಜಕ್ಕೆ ನಿನ್ನಿಂದ ಸಲ್ಲಬೇಕಾದ, ಮಾಮೂಲು—Mean—ಸೇವೆ, ಏನೊಂದೂ ಕಿಂಚಿತ್ತಾದರೂ ಸಂದಿಲ್ಲ. ನಿನಗಿಂತಲೂ ಕಪ್ಪೆಗಳು ಎಷ್ಟೋ ವಾಸಿ. ಪಾಂಡವ ಪುರದ ಕೊಂಬು ಕಪ್ಪೆಗಳು...."

"ಸ್ಟಾಪ್ !" ಅಂತ ಅರಚಿದೆ. ನಿಲ್ಲಿಸಿದ.

"ನಾಣಿ—ನಿಜವಾಗಿ ನೀನು ಹೇಳೋದು ಏನಾದರೂ ವಿಷಯವಿದ್ದರೆ—ಸ್ವಲ್ಪ ಸುಧಾರಿಕೊಂಡು ಹೇಳು"—ಅಂದೆ.

ತುಸ ಹೊತ್ತು ಸುಧಾರಿಸಿಕೊಂಡ.

"ಶೌರಿ—ನಿನ್ನ ಆ ಶೌರಿ— ಬಹಳ ಬುದ್ಧಿವಂತಕಣಯ್ಯ—ಚಾಣಕ್ಯ ಸತ್ತ ಅನ್ನಿಸೊಲ್ಲ" ಅಂದ.

ನಾನು ಈ ನಾಣಿಯ ಸಮಸ್ಯೆಯನ್ನು ಶೌರಿಗೆ ಒಪ್ಪಿಸಿದ್ದು—ಜ್ಞಾಪಕಕ್ಕೆ ಆಗ ಬಂತು.

"ಓಹೋ—ನಾಣಿ — ನಿನ್ನ ಮಾವನಿಗೂ — ನಿನಗೂ — ಕಪ್ಪೆಗಳ ಬಗ್ಗೆ — ಒಪ್ಪಂದವಾಯ್ತು—ಅನ್ನು !"

"ಅವರೂ ನಾನೂ ಸೇರಿ—ಎರಡು ಸಾವಿರ ರೂಪಾಯಿ ಬಂಡವಾಳ ಹಾಕಿ—ಒಂದು ಕಪ್ಪೆಯ ಕಾರ್ಖಾನೆಯನ್ನೇ ಸ್ಥಾಪಿಸ್ತೇವಯ್ಯಾ—ಎಲ್ಲಾ ನಿನ್ನ ಆ ಶೌರಿಯ ಸಲಹೆ."

"ಶೌರಿಯ ಸಲಹೆ ?"

"ಹೌಂದು—ಅದೇನೋ—ಮನಸಶ್ಶಾಸ್ತ್ರ ಪ್ರಯೋಗ ಅಂದ. ಬೇರೊಬ್ಬರನ್ನು ತನಗಿಂತಲೂ ಕೀಳು ಅಂತ ಮನಸ್ಸಿನಲ್ಲಿ ನಿರ್ಧರಿಸಿಕೊಂಡುಬಿಟ್ಟರೆ ಅವರ ಹತ್ತಿರ ರಾಜಾರೋಷವಾಗಿ ಮಾತನಾಡಬಹುದು ಅಂತ ಹೇಳಿದ. ಅದೇ ರೀತಿ ನಾನು—ಶ್ರೀಧರರಾಯರ ಹತ್ತಿರ ಮಾತನಾಡಿದೆ. ಅವರು—ಕೇವಲ ಪೆರಿಯಾಪಟ್ಟಣದ ನೀರಿನ ಕಪ್ಪೆ—ಅಂತ ಮನಸ್ಸಿನಲ್ಲಿ ನಿರ್ಧರಿಸಿಕೊಂಡು—ಮಾತನಾಡಿದೆ. ಮೊದಲಿಂದ ಕೊನೆಯವರಿವಿಗೂ — ಕಪ್ಪೆಯ ಹಾಗೆ ಬಾಯಿಬಿಟ್ಟುಕೊಂಡು—ಕೇಳುತ್ತಿದ್ದರು."

ಪ್ರಾಯಶಃ—ನಾನು ಮನೆಗೆ ಬಂದೊಡನೆ – ನನ್ನನ್ನೂ, ಈ ಕಪ್ಪೆ ಹುಚ್ಚ—ಒಂದು ಕಪ್ಪೆ ಅಂತ ತಿಳಿದು—ಆ ರೀತಿ ಹರಟಿರಬೇಕು. ಬೇರೆ ಯಾವ ಕಾರಣವೇ ಇಲ್ಲ.

ಊಟಮಾಡಿಸಿ ನಾಣಿಯನ್ನು ಮಲಗಿಸಿದ ಮೇಲೆ ಶೌರಿಯನ್ನು ಏಕಾಂತವಾಗಿ ನೋಡಿದಾಗ— ವಿಷಯವನ್ನೆಲ್ಲಾ ಕೇಳಿದೆ.

"ಹೌದು ಸರ್ ಶ್ರೀಧರರಾಯರನ್ನ ಒಂದು ಸಾಧಾರಣವಾದ—ಕಪ್ಪೆ ಅಂತ ತಿಳಿದುಕೊಂಡು ಮಾತನಾಡಿ ಅಂತ ಸಲಹೆಕೊಟ್ಟೆ" ಅಂತ ಒಪ್ಪಿಕೊಂಡ.

"ಆದರೆ—ನನ್ನೊಂದಿಗೆ ಆ ರೀತಿ ಹರಟಲು ಕಾರಣವೇನು ಶೌರಿ?"

"ಪ್ರಾಯಶಃ — ಅವರಿಗೆ ತರಬೇತು ಕೊಡುವಾಗ — ನಿಮ್ಮ ಬಗ್ಗೆ ಕೆಲವು ಪ್ರಸ್ತಾಪಕ್ಕೆ ಬಂದಿರಬೇಕು ಸರ್. ಹಾಗಾಗಿ—ಅವರ ಮನಸ್ಸಿನಲ್ಲಿ—ನಿಮ್ಮ ಬಗ್ಗೆ ಕೂಡ ತುಸ ತಾತ್ಸಾರ ಮನೋಭಾವ—ಬಂದಿರಬಹುದು ಸರ್."

"ಅಂದರೆ—ಶೀನಿ ನನ್ನನ್ನು ತೊಟ್ಟಿಯಲ್ಲಿ ಬೀಳಿಸಿದ್ದು ಹೇಳಿದೆಯಾ?"

"ಹೇಳಿದೆ ಸರ್"

"ಮೀಸೆ ಬಿಟ್ಟಿದ್ದು...."

"ಆ ಮೇಲೆ ಬೋಳಿಸಿದ್ದು—ಎಲ್ಲಾ ಹೇಳಿದೆ ಸರ್—ಬಹಳ ನಕ್ಕರು ಸರ್."

"ಘಟ್ಟಿಯಾಗಿ ನಕ್ಕರೇ ಶೌರಿ?"

"ಹೌದು ಸರ್. ಬೀದಿಯಲ್ಲಿ ಬೇಡೋಕೆ ಬಂದಿದ್ದ ಮೂರು ಜನ ಭಿಕ್ಷುಕರು ಹೆದರಿ ಓಡಿಹೋದರು ಸರ್."

"ಆದರೆ ಶೌರಿ—ಈ ಹುಚ್ಚನ ಜೊತೆ—ಶ್ರೀಧರರಾಯರು—ಎರಡು ಸಾವಿರ ರೂಪಾಯಿ ಬಂಡವಾಳ ಹಾಕಿ...."

"ಈಗೀಗ ಅಮೆರಿಕದಲ್ಲಿ ನಮ್ಮ ಕಪ್ಪೆಗಳನ್ನ ಮೆಚ್ಚಿ ಮೆಚ್ಚಿ ತಿನ್ನುಕ್ಕೆ ಶುರು ಮಾಡಿದ್ದಾರೆ ಸರ್. ಈ ವಿಷಯ ಅವರಿಗೆ ತಿಳಿಸಿ ಅಂತ ಹೇಳಿದ್ದೆ ಸರ್. ಹಣ್ಣಿನ ರಸ ತರಲೇ—ಸರ್!"

"ಬೇಡ—ಶೌರಿ. ಒಂದು ಮಾತ್ರೆ—ಹಾಲಿಲ್ಲದೆ ಕಾಫಿ ಒಂದಿಷ್ಟು ತಾ" ಅಂದೆ.

"ಸರಿ ಸರ್" ಅಂದ.

—ಕೇಫ

—:o:—

ಕೆನ್ ಮುರ್ರೆ ಜೋಕು

ಜೋಡೀಂದ್ರೆ ಜೋಡಿ
ಹಿಂಗಿರಬೇಕ್ ನೋಡಿ
ಆಕೆಗೆ ಗೊರಕೆ ಇರುಳೆಲ್ಲ
ಈತಂಗೆ ಕಿವುಡು ಕೇಳೋಲ್ಲ!

—ರಾಮಿ.

ನಿಂತು ಬಗ್ಗಿ ನಡಿ

ಅರೆ! ಇದೇನು ಬಂತು ಹೊಸ ನಿಯಮ! "ನಿಂತು ನಡೆಯಿರಿ" ಅಂತ ನಿಲು ಸಲಹೆಗಳನ್ನು ಪೋಲೀಸಿನವರು ರಸ್ತೆಚೌಕಗಳಲ್ಲಿ ಹಾಕಿರೋದು ಉಂಟು.

ಬಗ್ಗೋದೇನು ಬಂತು ನಡೆಯುಕ್ಕೆ ಮುಂಚೆ ಅಂತ ಕೇಳ್ತೀರೇನೋ? ತೊಗಲಕ್ ತರಹ ಸರಕಾರದ ಈ ಹುಕುಂ ಏನು ಅಂತೀರೇನೋ?

ಇಲ್ಲ. ಚಿಕ್ಕಪ್ಪನ ಮನೆಗೆ, ತಂದೆ ಶ್ರಾದ್ಧಕ್ಕೆಂದು, ನಮ್ಮ ಹುಟ್ಟೂರು ಪಾಯಸದಹಳ್ಳಿಗೆ ಹೋಗಿದ್ದೆ. ಹಳೆ ಕಾಲದ ಮನೆ ಆರು ಬಾಗಿಲು. ಕುಳ್ಳಾನೆ ಬಾಗಿಲುಗಳು. ತಿಥಿ ಮುಗಿಯೋ ಹೊತ್ತಿಗೆ ಹೊಗೆ ತುಂಬಿದ ಕೋಣೆಯಲ್ಲಿನ ಗಡಿಯಾರ ನಾಲ್ಕು ಬಾರಿ ಬಡಿದಿತ್ತು. ಎಲೆ ಹಾಕೋ ವೇಳೆಗೆ ಹೊರಗೆ ಹೋಗಿ ಎರಡು ನಿಮಿಷ ಶುಭ್ರವಾದ ಗಾಳಿ ಸೇವಿಸೋಣ ಅಂತ ಹೊರಟೆ. ಹಿಂದೆಯೇ ನನ್ನ ಚಿಕ್ಕಪ್ಪ ಬಂದರು. ಎಲ್ಲಾದರೂ ಮೈಲಿಗೆ ಮುಟ್ಟುತೀನೇನೋ ಅಂತ. ಪ್ರತಿ ಬಾಗಿಲು ದಾಟೋವಾಗಲೂ, ನಿಂತು ಬಗ್ಗಿನಡಿ ಅಂತ ಚಿಕ್ಕಪ್ಪ ಕೂಗ್ತಾ ಇದ್ದರು. ಹೋಗೋವಾಗ ಆರು ಸರ್ತಿ ಕೂಗಿದರು. ಊಟಕ್ಕೆ ಎಲೆ ಹಾಕಿದೆ ಅಂತ ಒಳಗಿನಿಂದ ಸುದ್ದಿ ಬಂದಾಗ, ಒಳಕ್ಕೆ ಹೋಗೋವಾಗ ನಾಲ್ಕು ಸರ್ತಿ ಕೂಗು ಕೇಳಿ ಬಂತು "ನಿಂತು ಬಗ್ಗಿ ನಡಿ" ಅಂತ. ಐದನೇ ಬಾಗಿಲ ಹತ್ತಿರ ನಿಂತು, ಬಗ್ಗಿ, ಕೂಗು ಕೇಳದೆ ಇದ್ದುದರಿಂದ ಹಿಂತಿರುಗಿ ನೋಡಿದೆ. ಚಿಕ್ಕಪ್ಪನ ಮೂಗು ಬಾಗಿಲಿನ ಮೇಲ್ಹೊಸಲಿಗೆ ಜಡಿದಿತ್ತು. ಚಿಕ್ಕಪ್ಪ ಎತ್ತರದ ಆಸಾಮಿ. ರಕ್ತ ಮೂಗಿಂದ ಸುರೀತಿತ್ತು.

ನಿನಗೆ ಎಚ್ಚರ ಕೊಡೋ ಅವಸರದಲ್ಲಿ, ನಮ್ಮನೆ ಬಾಗಿಲ್ನ ನಾನೇ ಮರೆತೆ ನಲ್ಲೋ ಎಂದು ಬೊಬ್ಬೆ ಇಟ್ಟರು. ಅವರಿಗೆ ಶೈತ್ಯೋಪಚಾರ ಮಾಡಿ ಊಟ ಮುಗಿಸಿದಾಗ ಸಂಜೆ ಆರು ಗಂಟೆಯಾಗಿತ್ತು.

ಷಹರಿಗೆ ಹಿಂತಿರುಗಿದ ಮೇಲೆ ಕಾಗದ ಬರೆದು ಹೇಗಿದ್ದೀರಿ ಎಂದು ಕೇಳಿದೆ. ಈಗ ವಾಸಿಯಾಗಿದೆ. ಒಂದು ಪ್ರಯೋಜನವೂ ಆಯ್ತು. ಮೂಗಿನ ಮಾಟವೇ ಬದಲಾಯಿಸಿದೆ. ಮೊದಲು. ಅರ್ಧ ತೊಲ ನಶ್ಯ ಹಿಡಿಸುತ್ತಿದ್ದ ಮೂಗಿನಲ್ಲಿ ಈಗ ಒಂದು ಚಿಟಿಕೆಗೇ ಅವಕಾಶವಿಲ್ಲ ಎಂದು ಉತ್ತರ ಬರೆದಿದ್ದರು. ಚಿಕ್ಕಪ್ಪ.

ಪೋಲೀಸಿನವರ ನಿಲು ಸಲಹೆ ತರಹ ನಾನೂ ಆರು ಬೋರ್ಡುಗಳನ್ನು ನಿಂತು ಬಗ್ಗಿ ಹೊರಡಿ ಅಂತ ಬರೆಸಿ ಚಿಕ್ಕಪ್ಪನಿಗೆ ಕಳಿಸಿದೆ. ಒಂದೊಂದು ಬಾಗಿಲಿಗೂ ತೂಗು ಹಾಕಿ ಅಂತ ಸಲಹೆ ಕೊಟ್ಟು.

—ಬ. ನ. ಮ.

ಕೊರವಂಜಿ

ಬಳೇಪೇಟೆ, : : ಬೆಂಗಳೂರು - 9

★

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩-೦೦

ಬಿಡಿ ಪ್ರತಿ ಕೇವಲ 25 ನಯೆ ಪೈಸೆ

★

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ

ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.


For 3 way Beauty Treatment....
RAJA
SNOW
AMLA HAIR OIL, KASTURI SOAP
MANIYAM & CO. BANGALORE MADRAS MADURAI BOMBAY

REG NO. B. G. 343 KORAVANJI NOV. 1961

Printed by B. S. Iyengar, Bangalore City.
Publisher—B N. Gupta. Editor—M. Sivaram